ಬೆಂಗಳೂರು ಸಂಪುಟ: 16 ಸಂಚಿಕೆ: 24 ಪುಟ: 06 ಶನಿವಾರ 14-12-2024 Mail: mussanje2010@gmail.com ₹ 3

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh www.mussanjenews.com

## ನಾವೂ ಈಗ ಡಿಜಿಟಲೀಕರಣಗೊಂಡಿದ್ದೇವೆ...

ಪ್ರಿಯ ಓದುಗರೇ.....

ತಮ್ಮೆಲ್ಲರ ಒತ್ತಾಸೆಯ ಮೇರೆಗೆ ನಿಮ್ಮ 'ಮುಸ್ಸಂಜೆ' ಸಂಜೆ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ. ಹದಿನೈದು ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ 16ನೇ ವಸಂತಕ್ಕೆ ಕಾಲಿಟ್ಟ ಈ ಸುಸಂದರ್ಭದಲ್ಲಿ ರಾಜ್ಯದಲ್ಲೇ ಅಲ್ಲದೇ ದೇಶದ ವಿವಿಧೆಡೆಗಳಿಂದ ಸಹಕಾರ ದೊರೆತ ಹಿನ್ನೆಲೆಯಲ್ಲಿ ಪತ್ರಿಕೆಯನ್ನು ಡಿಜಿಟಲೀಕರಣಗೊಳಿಸಿ ನೂತನ ವೆಬ್‌ಸೈಟ್ ಲಾಂಚ್ ಮಾಡುವ ಮೂಲಕ onlineನಲ್ಲಿ ಪತ್ರಿಕೆ ವೀಕ್ಷಿಸಲು ಅವಕಾಶ ಕಲ್ಪಿಸಿದ್ದೇವೆ. ಈಗ ಪತ್ರಿಕೆಯನ್ನು ನೈಜ ಸುದ್ದಿಯೊಂದಿಗೆ ಹೊಸ ರೂಪದಲ್ಲಿ ನಿಮ್ಮ ಮುಂದಿಡುವ ಪ್ರಯತ್ನ ಮಾಡಿದ್ದೇವೆ. ನಮ್ಮ ಈ ಪ್ರಯತ್ನಕ್ಕೆ ಓದುಗರು, ಚಂದಾದಾರರೂ, ಹಾಗೂ ಜಾಹೀರಾತುದಾರರಾದ ತಮ್ಮ ಪ್ರೋತ್ಸಾಹವನ್ನು ಎಂದಿನಂತೆ ನಿರೀಕ್ಷಿಸುತ್ತೇವೆ...

www.mussanjenews.com

- ಇಂತಿ ಸಂಪಾದಕ

### 'ಕೋವಿಡ್' ಅಕ್ರಮ ಪ್ರಕರಣದ ಸಂಬಂಧ ಎಫ್‌ಐಆರ್

# ಯಾರನ್ನು ಬಿಡುವುದಿಲ್ಲ

## ಎಸ್‌ಐಟಿ ರಚನೆ ಬಗ್ಗೆ ಮುಖ್ಯಮಂತ್ರಿ ಹಾಗೂ ಡಿಸಿಎಂ ಜತೆ ಚರ್ಚಿಸಿ ನಿರ್ಧಾರ

ಕಲಬುರ್ಗಿ : ಕೋವಿಡ್ ಹಗರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ. ಕೋವಿಡ್ ಕಾಲದಲ್ಲಿ ಹಗರಣ ನಡೆದಿತ್ತು. ಆ ಪ್ರಕರಣ ಸಂಬಂಧ ಈಗ ಎಫ್‌ಐಆರ್ ದಾಖಲಾಗಿದೆ. ಎಸ್‌ಐಟಿ ರಚನೆ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ನಿರ್ಧರಿಸುತ್ತಾರೆ. ಈ ಒಂದು ಪ್ರಕರಣದಲ್ಲಿ ಎಷ್ಟೇ ಪ್ರಭಾವಿಗಳು ಇದ್ದರೂ ಕೂಡ ನಾವು ಯಾರನ್ನು ಬಿಡುವುದಿಲ್ಲ. ತನಿಖೆ ಮಾಡಲು ಪೊಲೀಸರಿಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ನೀಡಿದ್ದೇವೆ ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ತಿಳಿಸಿದರು. ತನಿಖೆ ಮಾಡುತ್ತಿದ್ದ ವೇಳೆ ನಾನು ಹೆಸರು ಹೇಳಿದರೆ ತಪ್ಪಾಗುತ್ತದೆ. ಅವ್ಯವಹಾರ ಆಗಿದೆ ಎಂದು ನ್ಯಾ. ಕುನ್ಹಾ ವರದಿಯಲ್ಲಿ ಉಲ್ಲೇಖ ಆಗಿದೆ ಅದರ ಆಧಾರದ ಮೇಲೆ ಎಫ್‌ಐಆರ್ ದಾಖಲಾಗುತ್ತದೆ. ಇದಕ್ಕೆ ಬಿಜೆಪಿಯವರು ಯಾಕೆ ಭಯ ಪಡಬೇಕು? ಯಾರನ್ನು ಭಯ ಬೀಳಿಸುವುದಕ್ಕೆ ನಾವು ತನಿಖೆ ಮಾಡಿಸುತ್ತಿಲ್ಲ. ಕೋವಿಡ್ ವೇಳೆ ಆಕ್ಸಿಜನ್ ಇಲ್ಲದೆ ಜನ ಬೀದಿಯಲ್ಲಿ ಹೆಣವಾಗಿದ್ದಾರೆ ಯಾರ ವಿರುದ್ಧವೂ ಸೇಡಿನ ರಾಜಕಾರಣ ಮಾಡುತ್ತಿಲ್ಲ. ರಾಜ್ಯದ ಜನರಿಗೆ ಮಾತು ಕೊಟ್ಟಂತೆ ನಾವು ತನಿಖೆ ಮಾಡಿಸುತ್ತೇವೆ ಎಂದು ಹೇಳಿಕೆ ನೀಡಿದರು.



ಕೋವಿಡ್ ಸಾಂಕ್ರಾಮಿಕದ ವೇಳೆ ಪಿಪಿಇ ಕಿಟ್ ಹಾಗೂ ಎನ್-95 ಮಾಸ್ಕ್ ಸೇರಿದಂತೆ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದ ಅಕ್ರಮ ಪ್ರಕರಣದ ಸಂಬಂಧ ಜನಪ್ರತಿನಿಧಿಗಳು ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹಾಗೂ ಆರೋಗ್ಯ ಇಲಾಖೆಯ ಹಿಂದಿನ ಅಧಿಕಾರಿಗಳು, ವೈದ್ಯರು ಹಾಗೂ ಗುತ್ತಿಗೆದಾರರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಲೆಕ್ಕಪತ್ರಾಧಿಕಾರಿ ಎಂ.ವಿಷ್ಣು ಪ್ರಸಾದ್ ಅವರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ವಿಧಾನಸೌಧ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಡಾ.ಪಿ.ಗಿರೀಶ್, ರಾಜ್ಯ ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರಾಗಿದ್ದ ಜಿ.ಪಿ.ರಘು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ಸಲಕರಣೆ ಅಧಿಕಾರಿಯಾಗಿದ್ದ ಎನ್.ಮುನಿರಾಜು, ಲಾಜ್ ಎಕ್ಸ್‌ಪೋರ್ಟ್ಸ್, ಎಂಎಸ್ ಪ್ರೂಡೆಂಟ್ ಮ್ಯಾನೇಜ್‌ಮೆಂಟ್, ಕರ್ನಾಟಕ ಜನಪ್ರತಿನಿಧಿಗಳು, ಕರ್ನಾಟಕ ಸರ್ಕಾರದ ಅಧಿಕಾರಿಗಳು ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ 19 ಅವಧಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಮೂಲಕ ಕೋವಿಡ್ 19ರ ನಿರ್ವಹಣೆಗೆ ಅವಶ್ಯಕವಾಗಿ ಬೇಕಾಗಿದ್ದ ಎನ್-95 ಮಾಸ್ಕ್, ಪಿಪಿಇ ಕಿಟ್ ಹಾಗೂ ಇತರೆ ಸಾಮಗ್ರಿಗಳನ್ನು ಸಂಗ್ರಹಿಸಿರುವ ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಕಾನೂನಿನ ಎಲ್ಲ ಪ್ರಕ್ರಿಯೆಯನ್ನು ಗಾಳಿಗೆ ತೂರಿ ಕೆಟಿಪಿಪಿ ಕಾನೂನನ್ನು ಉಲ್ಲಂಘಿಸಲಾಗಿದೆ. ಕೋವಿಡ್ ನಿರ್ವಹಣೆಗೆ ನೇಮಿಸಿದ್ದ ಅಧಿಕಾರಿಗಳು ಹಾಗೂ ಖಾಸಗಿ ವ್ಯಕ್ತಿಗಳು ಅಪರಾಧ ಕೃತ್ಯ ಹಾಗೂ ಷಡ್ಯಂತ್ರ ರೂಪಿಸಿ ದೊಡ್ಡ ಮೊತ್ತದ ಹಣವನ್ನು ಪುಟ 2

## ಮತ್ತೆ ಶಾಲೆಗಳಿಗೆ ಬೆದರಿಕೆ ಸಂದೇಶ

**ನವದೆಹಲಿ:** ರಾಷ್ಟ್ರ ರಾಜಧಾನಿಯ ಹಲವು ಶಾಲೆಗಳಿಗೆ ಶನಿವಾರ ಕೂಡ ಬಾಂಬ್ ಬೆದರಿಕೆ ಕರೆಗಳು ಬಂದಿವೆ. ಒಂದೇ ವಾರದಲ್ಲಿ ಮೂರು ಬಾರಿ ಈ ರೀತಿ ಬಾಂಬ್ ಬೆದರಿಕೆ ಕರೆಗಳು ಬಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಡಿ. 8 ರಂದು 40 ಶಾಲೆ, ಡಿ. 13ರಂದು 30 ಮತ್ತು ಇಂದು (ಡಿ. 14) ಕೂಡ ಡಿಪಿಎಸ್ ಆರ್‌ಕೆ ಪುರಂ ಶಾಲೆಗಳಿಗೆ ಬೆದರಿಕೆ ಕರೆ ಬಂದಿವೆ. ಇಂದು ಬೆಳಗ್ಗೆ 6.09ಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಈ ಹಿನ್ನೆಲೆಯಲ್ಲಿ ಭದ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ನಡುವೆ ಬಾಂಬ್ ಬೆದರಿಕೆ ಸಂದೇಶ ಕುರಿತು ತನಿಖೆ ನಡೆಸುತ್ತಿದ್ದ ಪೊಲೀಸರಿಗೆ ಪಶ್ಚಿಮ ವಿಹಾರದಲ್ಲಿನ ಶಾಲೆಗೆ ಬಾಂಬ್ ಬೆದರಿಕೆ ಇಮೇಲ್ ಸಂದೇಶ ಕಳುಹಿಸಿದ್ದು, ಖಾಸಗಿ ಶಾಲೆ ವಿದ್ಯಾರ್ಥಿ ಎಂಬುದು ತನಿಖೆ ವೇಳೆ ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಮಾತನಾಡಿದ ಪೊಲೀಸರು, ಶಾಲಾ



ವಿದ್ಯಾರ್ಥಿಯೊಬ್ಬ ತನ್ನ ಶಾಲೆಗೆ ಬಾಂಬ್ ಬೆದರಿಕೆ ಸಂದೇಶವನ್ನು ಇಮೇಲ್ ಮೂಲಕ ಕಳುಹಿಸಿದ್ದಾರೆ. ಐಪಿ ಅಡ್ರೆಸ್ ಮೂಲಕ ಆತ ಹಾಗೂ ಮನೆಯ ವಿಳಾಸವನ್ನು ತನಿಖಾ ತಂಡ ಪತ್ತೆ ಮಾಡಿದೆ. ಈ ಸಂಬಂಧ ವಿದ್ಯಾರ್ಥಿಯನ್ನು ಪ್ರಶ್ನಿಸಿದಾಗ, ಆತ ತಾನು ಸಂದೇಶ ಕಳುಹಿಸಿದ್ದಾಗಿ ಒಪ್ಪಿಕೊಂಡಿದ್ದಾರೆ. ಸದ್ಯ ಆತನನ್ನು ಸಮಲೋಚನೆಗೆ ಒಳಪಡಿಸಲಾಗಿದೆ. ಆತನ ಪೋಷಕರಿಗೂ ಮಗನ ನಡುವಳಿಕೆ ಗಮನಿಸುವಂತೆ ಪುಟ 2



ಮಹಾತ್ಮ ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿ ಹಮ್ಮಿಕೊಳ್ಳಲುದ್ದೇಶಿಸಿರುವ ಮೂರು ದಿನಗಳ ಶತಮಾನೋತ್ಸವ ಕಾರ್ಯಕ್ರಮದ ಪೂರ್ವ ಸಿದ್ಧತೆಗಳ ಸುದ್ದಿಗೋಷ್ಠಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿದರು

## ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಉತ್ತರಾಧಿಕಾರಿಯಾಗಿ ನಾಗರಾಜ್ ನೇಮಕ

ಬೆಂಗಳೂರು: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಉತ್ತರಾಧಿಕಾರಿಯಾಗಿ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿ, ಸ್ವಯಂ ನಿವೃತ್ತಿ ಪಡೆದಿರುವ ಕೆಎಎಸ್ ಅಧಿಕಾರಿ, 49 ವರ್ಷದ ಡಾ.ಎಚ್.ಎಲ್.ನಾಗರಾಜ್ ಅವರನ್ನು ನೇಮಿಸಲಾಗಿದೆ ಎಂದು ವಿಶ್ವಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ತಿಳಿಸಿದರು.



ಮಠದಲ್ಲಿ ಸುದ್ದಿಗೋಷ್ಠಿ ನಡೆಸಿದ ಸ್ವಾಮೀಜಿ, ನನಗೆ ಈಗ 81 ವರ್ಷ ಆಗಿದೆ. ಹೀಗಾಗಿ, ನಮ ಮಠದೊಂದಿಗೆ ಅನೇಕ ವರ್ಷಗಳಿಂದ ಸಂಪರ್ಕದಲ್ಲಿರುವ, ಸೇವಾ ಕಾರ್ಯಗಳನ್ನು ಮಾಡುತ್ತಾ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಎಚ್. ಎಲ್‌ನಾಗರಾಜ್ ಅವರನ್ನು ಉತ್ತರಾಧಿಕಾರಿಯಾಗಿ ಭಗವಂತನ ಇಚ್ಛೆಯಂತೆ ಆಯ್ಕೆ ಮಾಡಲಾಗಿದೆ.

ಈ ಆಯ್ಕೆಗೆ ಮಠದ ಟ್ರಸ್ಟ್‌ನ ಎಲ್ಲಾ ಸದಸ್ಯರು ಸರ್ವಾನುಮಂತದಿಂದ ಒಪ್ಪಿಗೆ ಸೂಚಿಸಿದ್ದಾರೆ. ಮಠದ ಉತ್ತರಾಧಿಕಾರಿಯಾಗಿ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಗಳನ್ನು ನಾಥ ಪರಂಪರೆಯಂತೆ ನಡೆಸಿಕೊಂಡು ಹೋಗಲಿದ್ದಾರೆ ಎಂದು ಹೇಳಿದರು.

ಧಾರ್ಮಿಕತೆ ಮತ್ತು ಸಮಾಜ ಸೇವಾ ಮನೋಭಾವ ಹೊಂದಿದ್ದ ನಾಗರಾಜ್ ಅವರು ಅವಿವಾಹಿತರಾಗಿಯೇ ಇದ್ದಾರೆ. ಅವರು ಶನಿವಾರದಿಂದ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಮಹಾಸ್ವಾಮೀಜಿಯಾಗಿ ಮಠದ ಕಾರ್ಯಗಳು, ಶ್ರೀಮಠದ ಶಿಕ್ಷಣ ಸಂಸ್ಥೆಗಳನ್ನು ಇನ್ನಷ್ಟು ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗಲಿದ್ದಾರೆ. ಸೇವಾ ಕಾರ್ಯಗಳನ್ನು ಇನ್ನಷ್ಟು ವಿಸ್ತರಿಸಿಕೊಂಡು ಹೋಗುತ್ತಾರೆ ಎಂದು ಸ್ವಾಮೀಜಿ ತಿಳಿಸಿದರು. ಪುಟ 2

## ಎಲ್ ಕೆ ಅಡ್ವಾಣಿ ಆಸ್ಪತ್ರೆಗೆ ದಾಖಲು

**ನವದೆಹಲಿ:** ಬಿಜೆಪಿಯ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರ ಆರೋಗ್ಯ ಹದಗೆಟ್ಟ ಕಾರಣ ನವದೆಹಲಿಯ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಾಜಿ ಉಪಪ್ರಧಾನಿ ಹಾಗೂ ಬಿಜೆಪಿಯ ಮುಂಚೂಣಿ ನಾಯಕ ಅಡ್ವಾಣಿ ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಶುಕ್ರವಾರ ತಡರಾತ್ರಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆಸ್ಪತ್ರೆಗೆ ದಾಖಲಾಗಲು ಕಾರಣ ತಿಳಿದಿಲ್ಲವಾದರೂ, ಅಡ್ವಾಣಿ ಅವರನ್ನು ನಿಗಾದಲ್ಲಿರಿಸಲಾಗಿದೆ. ಸದ್ಯ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. 97 ವರ್ಷದ ಲಾಲ್ ಕೃಷ್ಣ ಅಡ್ವಾಣಿ ಅವರು ಕೆಲವು ಸಮಯದಿಂದ ಪುಟ 2

## ವಿಜೃಂಭಣೆಯ ಹುಟ್ಟುಹಬ್ಬ ಆಚರಣೆ ಬೇಡ



**ಬೆಂಗಳೂರು:** ವಿಜೃಂಭಣೆಯಿಂದ ನನ್ನ ಹುಟ್ಟುಹಬ್ಬ ಆಚರಣೆ ಮಾಡುವುದು ಬೇಡ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದ್ದಾರೆ. ಈ ಸಂಬಂಧ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಡಿಸೆಂಬರ್ 16ರಂದು ನನ್ನ ಜನದಿನ. ಪ್ರತೀ ವರ್ಷ ಪಕ್ಷದ ಕಾರ್ಯಕರ್ತರು ಬಹಳ ಅರ್ಥಪೂರ್ಣವಾಗಿ ನನ್ನ ಹುಟ್ಟುಹಬ್ಬ ಆಚರಿಸುತ್ತಾ ನನ್ನ ಬದುಕಿಗೆ ಸಾರ್ಥಕತೆ ತಂದು ಕೊಟ್ಟಿದ್ದೀರಿ. ರಾಜಕೀಯವಾಗಿ ನನ್ನ ಯಶಸ್ಸಿಗೆ ಮೂಲ ಆಧಾರಸ್ತಂಭವೇ ತಾವುಗಳು. ಆ ಕೃತಜ್ಞತಾ ಭಾವದಿಂದ ನಿಮ್ಮಲ್ಲಿ ನನ್ನದೊಂದು ವಿನಮ್ರ ಕಳಕಳಿಯ ಮನವಿ ಎಂದಿದ್ದಾರೆ.ಸಂಸತ್ ಅಧಿವೇಶನ ನಡೆಯುತ್ತಿರುವುದರಿಂದ ನಾನು ನವದೆಹಲಿಯಲ್ಲಿಯೇ ಉಳಿಯಬೇಕಾಗಿದೆ. ಅಲ್ಲದೆ, ಬೆಳಗಾವಿ ಸುವರ್ಣಸೌಧದಲ್ಲಿ ಕಲಾಪವೂ ಸಾಗಿದೆ. ಇಂಥಹ ಸನ್ನಿವೇಶದಲ್ಲಿ ವಿಜೃಂಭಣೆಯ ಹುಟ್ಟುಹಬ್ಬ ಬೇಡ ಎಂದು ಹೇಳಿದ್ದಾರೆ.ಪುಟ 2

## ಇಂದು ಮತ್ತೆ ದೆಹಲಿಯತ್ತ ರೈತರ ನಡಿಗೆ; ಶಂಭು ಗಡಿಯಲ್ಲಿ ಭಾರಿ ಬಿಗಿ ಬಂದೋಬಸ್ತ್

ಅಂಬಲಾ: ಹಲವು ಬೇಡಿಕೆಗೆ ಆಗ್ರಹಿಸಿ ರೈತರು ಇಂದು ಮತ್ತೆ ದೆಹಲಿಯತ್ತ ಮೆರವಣಿಗೆ ಹೊರಟಿದ್ದು, ಅಪರಾಹ್ನ 12ರ ಹೊತ್ತಿಗೆ 101 ರೈತರ ಗುಂಪು ಶುಂಭು ಗಡಿಯತ್ತ ಸಾಗಲಿದೆ. ಈ ಹಿನ್ನೆಲೆಯಲ್ಲಿ ಶಂಭು ಗಡಿಯಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ. ಹರಿಯಾಣ ಪೊಲೀಸರು ಬಹು ಹಂತದ ಬ್ಯಾರಿಕೇಡ್‌ಗಳನ್ನು ಹಾಕಿದ್ದಾರೆ. ಈ ವೇಳೆ, ಕಳೆದ ಬಾರಿಯಂತೆ ರೈತರು ಮತ್ತು ಪೊಲೀಸ್ ಸಿಬ್ಬಂದಿ ನಡುವೆ ಘರ್ಷಣೆಯಾಗುವ ಸಾಧ್ಯತೆ ತಳ್ಳಿಹಾಕುವಂತಿಲ್ಲ.

ಎರಡು ಬಾರಿ ವಿಫಲವಾದ ಮೆರವಣಿಗೆ: ರೈತರು



ಈ ಹಿಂದೆ ಎರಡು ಬಾರಿ ದೆಹಲಿಯತ್ತ ಮೆರವಣಿಗೆ ಕೈಗೊಂಡರೂ ಇವು ಯಶಸ್ವಿಯಾಗಿಲ್ಲ. ಶಂಭುಗಡಿ ಬಳಿಯೇ ಪೊಲೀಸರು ರೈತರನ್ನು ತಡೆದು ನಿಲ್ಲಿಸಿದರು. ಈ ಕುರಿತು ಮಾತನಾಡಿರುವ ರೈತ ನಾಯಕ ಸರ್ವನ್ ಸಿಂಗ್ ಪಂಧೇರ್, ನಾವು ಸರ್ಕಾರದೊಂದಿಗೆ ಮಾತನಾಡಲು ಸಮಯ ನೀಡಿದ್ದೇವೆ. ಆದರೆ, ಸರ್ಕಾರ ನಮ್ಮ ಬೇಡಿಕೆಗಳನ್ನು ಆಲಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ದೆಹಲಿಯತ್ತ ಕಾಲ್ನಡಿಗೆ ಮೆರವಣಿಗೆಗೆ ಮುಂದಾಗಿದ್ದೇವೆ. ನಾವು ಶಾಂತಿಯುತ ಹೋರಾಟಕ್ಕೆ ಮುಂದಾದರೂ ಸರ್ಕಾರ ಮತ್ತು ಆಡಳಿತ ನಮ್ಮನ್ನು ದೆಹಲಿಯತ್ತ ಸಾಗಲು ಬಿಡುತ್ತಿಲ್ಲ ಎಂದು ಕಿಡಿಕಾರಿದರು. ಮುಂದುವರೆದು ಮಾತನಾಡಿರುವ ರೈತ ಪುಟ 2

## ಮಾಜಿ ಸಿಜೆಐ ಚಂದ್ರಚೂಡ್ ಮೇಲೆ ಮೊಯಿತ್ರಾ ವಾಗ್ದಾಳಿ

**ನವದೆಹಲಿ:** ಬಿಜೆಪಿ ನೇತತ್ವದ ಕೇಂದ್ರವು ಸಾವಿರ ಕಡಿತದಿಂದ ಸಂವಿಧಾನವನ್ನು ರಕ್ತಸಿಕ್ತಗೊಳಿಸಿದೆ ಎಂದು ಆರೋಪಿಸಿದ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಕಳೆದ 10 ವರ್ಷಗಳಲ್ಲಿ ವ್ಯವಸ್ಥಿತವಾಗಿ ಪ್ರಜಾಪ್ರಭುತ್ವವನ್ನು ನಾಶಪಡಿಸಿದೆ ಎಂಬುದು ಸ್ಪಷ್ಟವಾಗಿದೆ ಎಂದು ಹೇಳಿದರು. ಸಂವಿಧಾನದ 75 ವರ್ಷಗಳ ಕುರಿತು ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಮೊಯಿತ್ರಾ, ಭಾರತದ ಕಲ್ಪನೆಯು ಅದರ ಶುದ್ಧ ರೂಪದಲ್ಲಿ ಉಳಿಯುವುದನ್ನು ಖಚಿತಪಡಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು. ಪುಟ 2

## ತಾಲ್ಲೂಕಿನಾದ್ಯಂತ ವಿಜೃಂಭಣೆಯ ಹನುಮ ಜಯಂತಿ ಆಚರಣೆ

* **ಕರಗಪ್ಪ**

ಶಿಡ್ಲಘಟ್ಟ : ತಾಲ್ಲೂಕಿನಾದ್ಯಂತ ಶ್ರೀಆಂಜನೇಯ ದೇವಾಲಯಗಳಲ್ಲಿ ಹನುಮ ಜಯಂತಿ ಪ್ರಯುಕ್ತ ಶುಕ್ರವಾರ ವಿಶೇಷ ಪೂಜೆ ನಡೆಸಲಾಯಿತು.


ತಾಲ್ಲೂಕಿನ ಚೌಡಸಂದ್ರ ವ್ಯಾಸರಾಯರ ಕಾಲದ ಸುಪ್ರಸಿದ್ಧ ಶ್ರೀಆಂಜನೇಯಸ್ವಾಮಿ ದೇವಾಲಯ, ನಾಗಮಂಗಲ ಅಭಯ ಹಸ್ತಾಂಜನೇಯ ದೇವಾಲಯ, ಅಪ್ಪೇಗೌಡನಹಳ್ಳಿ ಗ್ರಾಮದ ಆಂಜನೇಯ ದೇವಾಲಯ, ಅಪ್ಪೇಗೌಡನ ಹಳ್ಳಿ ಗೇಟ್ ಬಯಲಾಂಜನೇಯ ದೇವಾಲಯ, ಮುತ್ತೂರು ಗ್ರಾಮ,ಎಚ್.ಕ್ರಾಸ್, ಚೊಕ್ಕಂಡಹಳ್ಳಿ, ಎದ್ದಲತಿಪ್ಪೇನಹಳ್ಳಿ, ಜಂಗಮಕೋಟೆ ಕ್ರಾಸ್, ದೊಡ್ಡದಾಸರಹಳ್ಳಿ, ದಿಬ್ಬೂರಹಳ್ಳಿ, ಸಾದಲಿ, ಬಶೆಟ್ಟಿಹಳ್ಳಿ ಹಾಗು ನಗರದ ಅಶೋಕ ಪುಟ 2







# ರಾಜ್ಯವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಸಚಿವ ಎಂ ಬಿ ಪಾಟೀಲ ತುಡಿತ



**ಬೆಂಗಳೂರು:** ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ವ್ಯಾಪಕತೆ ಮತ್ತು ಸಮಗ್ರತೆ ತಂದುಕೊಡಲು ನಿರ್ಧರಿಸಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರು, ಬೆಂಗಳೂರಿನ ಸರ್ಜಾಪುರದಲ್ಲಿ 'ಸ್ವಿಫ್ಟ್ ಸಿಟಿ' ಎನ್ನುವ ವಿನೂತನ ಉಪಕ್ರಮದ ಅಭಿವೃದ್ಧಿಗೆ ಮುಂದಾಗಿದ್ದಾರೆ.

ಇದು ಎಲೆಕ್ಟ್ರಾನಿಕ್ ಸಿಟಿ, ಐಟಿಪಿಎಲ್ ನಂತರ ಸರ್ಕಾರವೇ ಸ್ಥಾಪಿಸುತ್ತಿರುವ ಯೋಜಿತ ನಗರವಾಗಲಿದೆ. ಹೆಸರೇ ಹೇಳುವಂತೆ ಇದು ನವೋದ್ಯಮಗಳು, ಕೆಲಸದ ಸ್ಥಳಗಳು, ಹಣಕಾಸು ಮತ್ತು ತಂತ್ರಜ್ಞಾನ ಈ ಐದೂ ಔದ್ಯಮಿಕ ಧಾರೆಗಳನ್ನು ಮುಖ್ಯವಾಗಿ ಪರಿಗಣಿಸಿದೆ. ಇದನ್ನು ಸಾಧಿಸಲು ಸರ್ಜಾಪುರ ಕೈಗಾರಿಕಾ ಪ್ರದೇಶದಲ್ಲಿ 1,000 ಎಕರೆಗೂ ಹೆಚ್ಚು ಜಮೀನನ್ನು ಮೀಸಲಿಡಲಾಗುವುದು ಎಂದು ಅವರು ತಮ್ಮ ಮಹತ್ವಾಕಾಂಕ್ಷೆಯನ್ನು ಹಂಚಿಕೊಂಡಿದ್ದಾರೆ.

ಇದನ್ನು ಮೂಲಭೂತವಾಗಿ ನಾವೀನ್ಯತೆ ಮತ್ತು ಬೆಳವಣಿಗೆಗಳ ಆಡುಂಬೊಲವನ್ನಾಗಿ ಬೆಳೆಸಬೇಕು ಎನ್ನುವುದು ಅವರ ದೂರದೃಷ್ಟಿಯಾಗಿದೆ.

'ಬೆಂಗಳೂರಿನಲ್ಲಿ ಇಂದು ಸಾವಿರಾರು ಕಂಪನಿಗಳಿವೆ, ನಿಜ. ಆದರೆ ಇವುಗಳಿಗೆ ಯೋಜಿತ ಮತ್ತು ವ್ಯವಸ್ಥಿತ ತಾಣಗಳಿಲ್ಲ ಎನ್ನುವ ಅಸಮಾಧಾನ ಹಲವರಲ್ಲಿದೆ. ಆದ್ದರಿಂದ ಸರ್ಜಾಪುರದಲ್ಲಿ ಇಂತಹ ಹೆಜ್ಜೆ ಇಡಲಾಗುತ್ತದೆ. ಇಲ್ಲಿ 150 ಮೀ. ಅಗಲದ ಸಂಪರ್ಕ ರಸ್ತೆ ಮಾಡಿ, ಅಲ್ಲಿ ವಿಶ್ವ ದರ್ಜೆಯ ಸೌಲಭ್ಯಗಳು, ವಸತಿ ವ್ಯವಸ್ಥೆ, ಶಾಲೆಗಳು ಇರುವಂತೆ ಅಭಿವೃದ್ಧಿ ಪಡಿಸಲಾಗುವುದು. ನೆರೆ ರಾಜ್ಯಗಳಿಂದ ನಮಗೆ ತೀವ್ರ ಸ್ಪರ್ಧೆ ಇದೆ. ಹೀಗಾಗಿ ಇಂತಹ ಉಪಕ್ರಮ ಅನಿವಾರ್ಯ' ಎನ್ನುವುದು ಅವರ ಮುಂದಾಲೋಚನೆ ಆಗಿದೆ.

ಈ ಬಗ್ಗೆ ತಮ್ಮ ಚಿಂತನೆಗಳನ್ನು ಹಂಚಿಕೊಂಡಿರುವ ಅವರು, 'ಸರ್ಜಾಪುರ ಪ್ರದೇಶವು ರಾಜಧಾನಿಯಲ್ಲಿರುವ ಐಟಿ ತಾಣಗಳಿಗೆ ಹತ್ತಿರದಲ್ಲಿದ್ದು, ರಾಷ್ಟ್ರೀಯ ಹೆದ್ದಾರಿ 44 ಮತ್ತು 48ಕ್ಕೆ ಹತ್ತಿರಲ್ಲಿದೆ. ಸಂಪರ್ಕ ಸೌಲಭ್ಯದ ದೃಷ್ಟಿಯಿಂದ ಇದು ವರದಾನವಾಗಿದ್ದು, ಈ ಭಾಗದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಬೆಳವಣಿಗೆಗೆ ಇಂಬು ನೀಡಲು ಸೂಕ್ತ ಸ್ಥಳವಾಗಿದೆ. ಇದನ್ನೆಲ್ಲ ಪರಿಗಣಿಸಿ, ಇದನ್ನು ಸ್ವಿಫ್ಟ್ ಸಿಟಿಯನ್ನಾಗಿ ಅಭಿವೃದ್ಧಿ ಪಡಿಸಲಾಗುವುದು. ಇದು ಸ್ಟಾರ್ಟಪ್ ಹಬ್ ಆಗಲಿದ್ದು, ಇಲ್ಲಿ 8-10 ಅತ್ಯಾಧುನಿಕ ಪ್ಲಗ್ ಅಂಡ್ ಪ್ಲೇ ಸೌಲಭ್ಯಗಳು ಇರಲಿವೆ. ಇಂತಹ ಒಂದೊಂದು ಸ್ಥಾವರಕ್ಕೂ 20-25 ಎಕರೆ ಕೊಡಲಾಗುವುದು' ಎಂದಿದ್ದಾರೆ.

ಈ ಪ್ಲಗ್ ಅಂಡ್ ಪ್ಲೇ ಪ್ರದೇಶದಲ್ಲಿ ಸುಸಜ್ಜಿತ ಕಚೇರಿಗಳು, ವಸತಿ ಪ್ರದೇಶಗಳು, ಕೋ-ವರ್ಕಿಂಗ್ ತಾಣಗಳು ಎಲ್ಲವೂ ಇರಲಿವೆ. ಈ ಮೂಲಕ ಉದ್ಯಮಗಳ ಒಂದು ವ್ಯವಸ್ಥಿತ ಜಾಲ ಏರ್ಪಡಲಿದ್ದು, ಅವು ಪರಸ್ಪರ ಸಹಭಾಗಿತ್ವ ಏರ್ಪಡಿಸಿಕೊಳ್ಳುವುದು ಸುಗಮವಾಗಲಿದೆ.

ಮುಖ್ಯವಾಗಿ, ಇಡೀ ರಾಜ್ಯವನ್ನೇ ಹಂತಹಂತವಾಗಿ 'ಸಿಲಿಕಾನ್ ರಾಜ್ಯ'ವನ್ನಾಗಿ ಮಾಡಲಾಗುವುದು. ಸಿಲಿಕಾನ್ ಸಿಟಿ ಅಂದ್ರೆ ಬೆಂಗಳೂರು. ಈಗ ಅದನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವುದು ನಮ್ಮ ಉದ್ದೇಶ. ವಿಜಯಪುರ, ಹುಬ್ಬಳ್ಳಿ-ಧಾರವಾಡ ಸೇರಿದಂತೆ ಐದು ನಗರಗಳಲ್ಲಿ ಮಿನಿ ಕ್ವಿನ್ ಸಿಟಿ ಅಭಿವೃದ್ಧಿಪಡಿಸುವುದರ ಮೂಲಕ ಇದನ್ನು ಸಾಕಾರಗೊಳಿಸುವ ಉದ್ದೇಶ ಇದೆ. ಇದಕ್ಕೆ ಐಟಿ ಇಲಾಖೆಯ ಸಹಕಾರವನ್ನೂ ಪಡೆಯಲಾಗುವುದು. ಫೆಬ್ರವರಿಯಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಈ ಸಂಬಂಧ ಹೆಚ್ಚಿನ ಮಾಹಿತಿ ನೀಡಲಾಗುವುದು ಎಂದು ಪಾಟೀಲ ವಿವರಿಸುತ್ತಾರೆ.

ಇದಲ್ಲದೆ, ಸ್ವಿಫ್ಟ್ ಸಿಟಿಯಲ್ಲಿ ನೆಲೆಯೂರಲಿರುವ ಸಣ್ಣ ಮತ್ತು ಮಧ್ಯಮ ಸ್ತರದ ಸ್ಟಾರ್ಟಪ್ ಉದ್ಯಮಗಳಿಗೆ ಕನಿಷ್ಠ 5,000 ಚದರ ಅಡಿಗಳಿಂದ ಹಿಡಿದು ಗರಿಷ್ಠ 20,000 ಚದರ ಅಡಿಗಳಷ್ಟು ಜಾಗವನ್ನು ಭೋಗ್ಯ, ಕ್ರಯ ಅಥವಾ ಬಂಡವಾಳ ಆಧರಿತ ಹಂಚಿಕೆ ಮಾದರಿಯಲ್ಲಿ ಒದಗಿಸಲಾಗುವುದು. ಈ ಮೂಲಕ, ಪ್ರವರ್ಧಮಾನಕ್ಕೆ ಬರುತ್ತಿರುವ ಹೊಸ ಬಗೆಯ ಉದ್ಯಮಗಳ ಅಗತ್ಯಗಳನ್ನು ಪೂರೈಸುವುದು ಸಾಧ್ಯವಾಗಬೇಕೆನ್ನುವುದು ನಮ್ಮ ಚಿಂತನೆಯಾಗಿದೆ. ಮುಖ್ಯವಾಗಿ ಇದು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಡೇಟಾ ಅನಲಿಟಿಕ್ಸ್ ಮತ್ತು ಫಿನ್-ಟೆಕ್ ನಾವೀನ್ಯತಾ ಕೇಂದ್ರವಾಗಿಯೂ ಮುಂಚೂಣಿಗೆ ಬರಲಿದೆ ಎಂದು ಹೇಳಲು ಅವರು ಮರೆಯುವುದಿಲ್ಲ.

## ಮುಡಾ: ಮಾಜಿ ಪಾಲಿಕೆ ಸದಸ್ಯನ ವಿರುದ್ಧ ಗಂಭೀರ ಆರೋಪ

**ಮೈಸೂರು:** ಸಿಎಂ ಸಿದ್ದರಾಮಯ್ಯ ವಿರುದ್ಧ ಮುಡಾ ಅಕ್ರಮ ಹಗರಣ ಕುರಿತು ಲೋಕಾಯುಕ್ತ ತನಿಖೆ ನಡೆಯುತ್ತಿದ್ದು ಇದೀಗ ಮತ್ತೊಂದ ಪ್ರಕರಣ ಬಯಲಾಗಿದೆ.

ಭೂಮಿಯನ್ನೇ ವಶಕ್ಕೆ ಪಡೆಯದೆ ಕೋಟ್ಯಾಂತರ ರೂ ಮೌಲ್ಯದ ಸೈಟ್ ಗಳನ್ನ ನೀಡಿದ ಮತ್ತೊಂದು ಪ್ರಕರಣ ಬಯಲಾಗಿದೆ. ಪಾಲಿಕೆ ಮಾಜಿ ಸದಸ್ಯ ಎಂ.ಸಿ.ರಮೇಶ್ ಅವರು ಸುಳ್ಳು ದಾಖಲೆ ಸೃಷ್ಟಿಸಿ 50:50 ಯಲ್ಲಿ ಸೈಟ್ ಗಳನ್ನ ಪಡೆದಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಈ ಕುರಿತು ದೂರುದಾರ ಸ್ನೇಹಮಯಿ ಕೃಷ್ಣ, ವಕೀಲ ರವಿಕುಮಾರ್, ಮುಡಾದ ಮಾಜಿ ಉದ್ಯೋಗಿ ಪಿ.ಎಸ್.ನಟರಾಜ್ ಮೈಸೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ದೂರುದಾರ ಸ್ನೇಹಮಯಿ ಕೃಷ್ಣ, ನಾನು ಕೇವಲ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುತ್ತಿಲ್ಲ. ಮುಡಾ ಪ್ರಕರಣದಲ್ಲಿ ಜೆಡಿಎಸ್ ವಿರುದ್ಧವೂ ಹೋರಾಡಿದ್ದೆ. ಈಗ ಬಿಜೆಪಿ ವಿರುದ್ಧವೂ ಹೋರಾಟ ಮಾಡುತ್ತಿದ್ದೇನೆ ಎಂದರು.

ಮುಡಾ 50:50 ಹಗರಣ ಪ್ರಕರಣ ಸಂಬಂಧ ಪಾಲಿಕೆ ಮಾಜಿ ಸದಸ್ಯ ಹಾಗೂ ಬಿಜೆಪಿ ಮುಖಂಡ ಎಂ.ಸಿ.ರಮೇಶ್ ಅಕ್ರಮ ಎಸಗಿದ್ದಾರೆ. ಮುಡಾದ 50:50 ಅನುಪಾತದಲ್ಲಿ ಅಕ್ರಮವಾಗಿ ಸೈಟ್ ಪಡೆದಿದ್ದಾರೆ. ಎಂ.ಸಿ.ರಮೇಶ್ ವಿರುದ್ಧ ಮೊದಲ ಐಟಿ ಪ್ರಕರಣ ದಾಖಲಾಗಿದೆ. ಈ ಪ್ರಕರಣ ಸಿಬಿಐಗೂ ಕೂಡ ವರ್ಗಾವಣೆ ಆಗುತ್ತದೆ. ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲೇಬೇಕು ಎಂದು ತಿಳಿಸಿದರು.

ಮುಡಾವನ್ನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಎಂದು ತೆಗೆದು ಹಾಕಿ. ಉಳ್ಳವರ ಆಸ್ತಿ ರಕ್ಷಣೆಯ ಪ್ರಾಧಿಕಾರ ಎಂದು ಮಾಡಿಕೊಳ್ಳಿ ಎಂದು ಕಿಡಿಕಾರಿದರು.

## ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ, ಪ್ರತಿಮೆಗಳ ಅನಾವರಣ ಸಮಾರಂಭ

**ಬೆಂಗಳೂರು:** ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ,ಅಂಶರಾ ಸಹಾಯ ಸೇವಾ ಟ್ರಸ್ಟ್ ವತಿಯಿಂದ ರಾಜಾಜಿನಗರದ ಮಂಜುನಾಥ ನಗರದ ತಿಮ್ಮಯ್ಯ ರಸ್ತೆಯಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ,ರಾಜ್ ಕುಮಾರ್, ಆಟೋರಾಜ ಶಂಕರ್ ನಾಗ್ ಪ್ರತಿಮೆ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಶಾಸಕ ಸುರೇಶ್ ಕುಮಾರ್ ಪತ್ನಿ, ಪತ್ರಕರ್ತೆ ಸಾವಿತ್ರಮ್ಮ ಧ್ವಜಾರೋಹಣ ನೆರವೇರಿಸಿ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿದರು.

ಉಚಿತ ಆರೋಗ್ಯ ತಪಾಸಣಾ ಶಿಭಿರದಲ್ಲಿ ನೂರಾರು ಮಂದಿ ಭಾಗವಹಿಸಿದ್ದರು. ಸಂಜೆ ನೂತನ ಪ್ರತಿಮೆಗಳಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಚಾಲನೆ ನೀಡಲಿದ್ದಾರೆ.

ಸಂಸ್ಥಾಪಕ ಅಧ್ಯಕ್ಷರಾದ ಬಿ.ವಿ.ಶಂಕರ್, ಉಪಾಧ್ಯಕ್ಷರಾದ ಹರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಜಯರಾಮ್.ಕೆ. ಜಂಟಿ ಕಾರ್ಯದರ್ಶಿ ಸುರೇಶ್ ಜಿ.ಖಚಾಂಚಿ ಅನಿಲ್ ಕುಮಾರ್ ಎನ್,ಲೋಕೇಶ್, ಮೊಹಮ್ಮದ್ ರಫೀಕ್, ಶೇಖರ್ ಎಸ್, ಪತ್ರಕರ್ತಚಂದ್ರಶೇಖರ್ ಭಾಗವಹಿಸಿದ್ದರು.




## ಕಬಡ್ಡಿ ಆಟಗಾರ ಪ್ರೀತಮ್ ನಿಧನ..!

ರಾಜ್ಯಮಟ್ಟದ ಕಬಡ್ಡಿ ಆಟಗಾರ ನಡುಮನೆ ಪ್ರೀತಮ್ ಶೆಟ್ಟಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರೀತಮ್ ಭಾಗವಹಿಸಿದ್ದರು. ಈ ಪಂದ್ಯಾಟದ ನಡುವೆ ಅವರಿಗೆ ಎದೆ ನೋವು ಕಾಣಿಸಿಕೊಂಡಿದೆ.ಎದೆ ನೋವಿನಿಂದ ಅಂಗಳದಲ್ಲೇ ಕುಸಿದು ಬಿದ್ದ ಅವರನ್ನು ಸಹ ಆಟಗಾರರು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ ಅಷ್ಟರಲ್ಲಾಗಲೇ ಪ್ರೀತಮ್ ಶೆಟ್ಟಿ ಅವರು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಮುಟ್ಲುಪಾಡಿ ನಡುಮನೆ ನಿವಾಸಿಯಾಗಿರುವ ಪ್ರೀತಮ್ ಶೆಟ್ಟಿ ಅತ್ಯುತ್ತಮ ಕಬಡ್ಡಿ ಆಟಗಾರನಾಗಿ ಗುರುತಿಸಿ ಕೊಂಡಿದ್ದರು. ಮೃತ ಪ್ರೀತಮ್ ಶೆಟ್ಟಿ ತಾಯಿ ಹಾಗೂ ಓರ್ವ ಸಹೋದರನನ್ನು ಅಗಲಿದ್ದಾರೆ. ಕೆಲ ತಿಂಗಳುಗಳ ಹಿಂದೆಯಷ್ಟೇ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ್ದ ಕಬಡ್ಡಿ ಆಟಗಾರ ನಿರ್ಭಯ್ ಸಿಂಗ್ ಹಾತೂರ್ ಹೃದಯಾಘಾತದಿಂದ ನಿಧನರಾಗಿದ್ದರು. 35 ವರ್ಷದ ನಿರ್ಭಯ್ ಸಿಂಗ್ ಅತ್ಯುತ್ತಮ ಪ್ರದರ್ಶನಗಳೊಂದಿಗೆ ವಿದೇಶಗಳಲ್ಲೂ ತಮ್ಮ ಖ್ಯಾತಿ ವಿಸ್ತರಿಸಿದ್ದರು. ಅಲ್ಲದೆ ವಿವಿಧ ರಾಷ್ಟ್ರೀಯ ಲೀಗ್ ಗಳಲ್ಲಿ ಕಾಣಿಸಿಕೊಂಡಿದ್ದ ಅವರಿಗೆ ಬಹುಮಾನವಾಗಿ ಒಂದೇ ವರ್ಷದಲ್ಲಿ ಅರ್ಧ ಡಜನ್‌ಗಿಂತಲೂ ಹೆಚ್ಚು ಮೋಟಾರ್‌ಸೈಕಲ್‌ಗಳು ಲಭಿಸಿದ್ದವು. ಹೀಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದ ನಿರ್ಭಯ್ ಸಿಂಗ್ ಹಾತೂರ್ ಅವರ ನಿಧನವು ಕ್ರೀಡಾ ಪ್ರೇಮಿಗಳಿಗೆ ಆಘಾತ ನೀಡಿತ್ತು. ಇದೀಗ ಕರಾವಳಿಗೆ ಭಾಗದಲ್ಲಿ ಖ್ಯಾತಿ ಪಡೆದಿದ್ದ ಕಬಡ್ಡಿ ಪಟು ಪ್ರೀತಮ್ ಶೆಟ್ಟಿ ನಿಧನದಿಂದ ಅವರ ಆಪ್ತವಲಯವು ಆಘಾತಕ್ಕೀಡಾಗಿದೆ.

## ತನಿಖೆಗೆ ಅಡ್ಡಿ ಕ್ಯಾಸಿನೊ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲು

**ಪಣಜಿ:** ಕಡಲಾಚೆಯ ಕ್ಯಾಸಿನೊ ನಡೆಸುತ್ತಿರುವ ಹಡಗಿನ ಮೇಲೆ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ಇಡಿ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಲಾಗಿದೆ. ಈ ಸಂಬಂಧ ಕ್ಯಾಸಿನೊ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಡಿ.12ರಂದು ಕ್ರೂಸ್ ಕ್ಯಾಸಿನೊ ಪ್ರೈಡ್ ಈ ಘಟನೆ ನಡೆದಿದೆ. ಕ್ಯಾಸಿನೊ ನಿರ್ದೇಶಕ, ಇಬ್ಬರು ಹಿರಿಯ ಸಿಬ್ಬಂದಿ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುವಾಗ ಹಲ್ಲೆ ನಡೆಸಿ ಅಡ್ಡಿಪಡಿಸಿದ್ದಾರೆ. ಅಕ್ರಮ ಬಂಧನದಲ್ಲಿಟ್ಟು ಬೆದರಿಕೆ ಹಾಕಿದ್ದಾರೆ. ಶೋಧದ ವೇಳೆ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಸಂಗ್ರಹಿಸಿದ್ದ ಕೆಲವು ಪ್ರಮುಖ ದಾಖಲೆಗಳನ್ನು ಆರೋಪಿಗಳು ನಾಶಪಡಿಸಿದ್ದಾರೆ ಎಂದು ಆರೋಪಿಸಲಾಗಿದೆ. ಗುರುವಾರ ಕ್ಯಾಸಿನೊಗೆ ತೆರಳಿದ್ದ ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಪಾಲೂರಿ ಚನ್ನಕೇಶವ ರಾವ್ ಮತ್ತು ತಂಡ ಕೊಠಡಿಯೊಂದರಲ್ಲಿ ಕೂಡಿ ಹಾಕಿದ್ದರು. ಅಲ್ಲಿ ಅವರ ಮೇಲೆ ದಾಳಿ ಮಾಡಲಾಯಿತು.

## ಪ್ರವಾಸಿಗರ ಮನಸೆಳೆದ ನಂದಿಬೆಟ್ಟದ ಮಂಜು

ಚಿಕ್ಕಬಳ್ಳಾಪುರ: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾದ ಪರಿಣಾಮ ರಾಜ್ಯದಲ್ಲಿ ನಿನ್ನೆ ಹಲವೆಡೆ ಭಾರೀ ಮಳೆಯಾಗಿದರೆ ಮತ್ತೆ ಕೆಲವೆಡೆ ತುಂತುರು ಮಳೆಯಾಗಿದೆ. ಇನ್ನು ನಿನ್ನೆ ಮುಂಜಾನೆಯಿಂದ ಮೋಡ ಕವಿದ ವಾತಾವರಣ ಉಂಟಾಗಿ, ಚಳಿಯ ಜೊತೆ ತುಂತುರ ಹನಿಯಲ್ಲಿ ಜನರು ಗಡಗಡ ನಡುಗಿದ್ದಾರೆ.ಅತ್ತ ನಂದಿ ಬೆಟ್ಟದಲ್ಲಿ ಮಂಜು ಮುಸುಕಿದ ವಾತಾವರಣ ಪ್ರವಾಸಿಗರ ಚಿತ್ತಾಕರ್ಷಿಸಿದೆ.

ಮಂಜಿನಿಂದ ಆವೃತವಾಗಿರುವ ವಿಶ್ವವಿಖ್ಯಾತ ನಂದಿಗಿರಿಧಾಮ, ಎದುರಗಡೆ ಇರೋ ವ್ಯಕ್ತಿಯೂ ಕಣ್ಣಿಗೆ ಕಾಣದಷ್ಟು ಮೈಗೆ ಹೊದ್ದುಕೊಂಡಿರೋ ಮಂಜು, ಮಂಜಿನ ನಡುವೆಯೇ ಪ್ರೇಮಿಗಳ ಕಲರವ, ಅರಳಿ ನಿಂತ ಹೂಗಳು, ಹಚ್ಚು ಹಸುರಾಗಿ ಸಂಭ್ರಮಿಸುತ್ತಿರೋ ಗಿಡ ಮರಗಳು, ತೊಟಕ್ ತೊಟಕ್ ಅಂತ ಮರ ಗಿಡಗಳಿಂದ ಜಾರಿ ಬೀಳುವ ಇಬ್ಬನಿಯ ಹನಿಗಳ ಸದ್ದು, ಇದರ ನಡುವೆಯೇ ಪ್ರೇಮಿಗಳ ಪಿಸುಮಾತು ಅಬ್ಬಬ್ಬಾ ನಂದಿಬೆಟ್ಟ ಕೇವಲ ಬೆಟ್ಟವಲ್ಲ ಅದೊಂದು ನಿಸರ್ಗದ ಗಣಿ, ಪ್ರಕೃತಿಯ ಸೌಂದರ್ಯಕ್ಕೆ ಸಾಟಿಯೇ ಇಲ್ಲ ಎನ್ನುವಂತ ಸ್ವರ್ಗಧಾಮ. ಹೌದು. ಚಳಿಗಾಲ ಆರಂಭವಾಗುತ್ತಿದ್ದಂತೆ ನಂದಿಬೆಟ್ಟಕ್ಕೆ ಮಂಜು ಆವೃತವಾಗಲು ಆರಂಭವಾಗುತ್ತದೆ, ಅದರಲ್ಲೂ ಚಳಿಗಾಲದಲ್ಲಿ ಹೆಚ್ಚಾಗಿ ಪ್ರವಾಸಿಗರು, ಚಾರಣಿಗರು, ಪ್ರಕೃತಿ ಪ್ರಿಯರು ನಂದಿಬೆಟ್ಟಕ್ಕೆ ಆಗಮಿಸ್ತಾರೆ. ಅದರಲ್ಲೂ ಈಗ ಸೈಕ್ಲೋನ್ ಬೇರೆ ಇದ್ರಿಂದ ವಿಶ್ವವಿಖ್ಯಾತ ನಂದಿಗಿರಿಧಾಮ ಮಂಜನ್ನೇ ಹೊದ್ದುಕೊಂಡು ಮಲಗಿದಂತೆ ಭಾಸವಾಗುತ್ತಿದ್ದು, ಮಂಜಿನ ನಡುವೆಯೇ ಪ್ರವಾಸಿಗರು ಕುಣಿದು ಕುಪ್ಪಳಿಸುತ್ತಿದ್ದಾರೆ. ಫೋಟೋ, ಸೆಲ್ಫಿ ತಗೊಂಡು ಸಖತ್ ಎಂಜಾಯ್ ಮಾಡ್ತಿದ್ದು, ನಂದಿಬೆಟ್ಟದ ಸೌಂದರ್ಯಕ್ಕೆ ಮಾರು ಹೋಗಿದ್ದಾರೆ.

# ತಾಲ್ಲೂಕಿನಾದ್ಯಂತ ವಿಜೃಂಭಣೆಯ ಹನುಮ ಜಯಂತಿ ಆಚರಣೆ

**ಮೊದಲ ಪುಟದಿಂದ:**

ರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮಜಯಂತಿ ಪ್ರಯುಕ್ತ ಒಂದು ದಿನ ರಾಮ ಕೋಟಿ ಏರ್ಪಡಿಸಲಾಗಿತ್ತು, ನಗರದ ಕೋಟೆ ಆಂಜನೇಯ ದೇವಾಲಯ, ಮಯೂರ ವೃತ್ತದ ಆಂಜನೇಯಸ್ವಾಮಿ, ಚಿಂತಾಮಣಿ ರಸ್ತೆಯಲ್ಲಿರುವ ವೀರಾಂಜನೇಯ ದೇಗುಲ, ಮುಂತಾದೆಡೆ ಹನುಮ ಜಯಂತಿ ಆಚರಿಸಲಾಯಿತು.

ತಾಲ್ಲೂಕಿನ ಚೌಡಸಂದ್ರ ಗ್ರಾಮದ ಸುಪ್ರಸಿದ್ಧ ಆಂನೇಯಸ್ವಾಮಿ ದೇವಾಲಯದಲ್ಲಿ ಹನುಮಜಯಂತಿ ಹಾಗೂ 35 ನೇ ವಾರ್ಷಿಕೋತ್ಸವವನ್ನು ಬಹಳ ಶ್ರಧ್ಧಾ ಭಕ್ತಿಯಿಂದ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.

ತಾಲ್ಲೂಕಿನ ಚೌಡಸಂದ್ರ ಗ್ರಾಮದಲ್ಲಿ ಸುಮಾರು 800 ವರ್ಷಗಳ ಹಿಂದೆ ಕುಮಾರವ್ಯಾಸರಾಯ ಕಾಲಾವಧಿಯಲ್ಲಿ ನೆಲೆಸಿರುವ ಶ್ರೀಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು.

ತಾಲ್ಲೂಕು ಸೇರಿದಂತೆ ನಾನಾ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದಲೂ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಬಂದು ದೇವರ ದರ್ಶನ ಮಾಡಿ ಪೂಜಾ ಕಾರ್ಯಕ್ರಮಗಳು ನೆರವೇರಿಸಿದರು. ದೇವರ ದರ್ಶನಕ್ಕೆ ಬಂದಿದ್ದ ಸಹಸ್ರಾರು ಭಕ್ತಾಧಿಗಳಿಗೆ ಅನ್ನಸಂತರ್ಪಣೆ ವ್ಯವಸ್ಥೆಯನ್ನು ಮಾಡಲಾಗಿತ್ತು.

ಹನುಮಜಯಂತಿಯ ಪ್ರಯುಕ್ತ ಬೆಳಿಗ್ಗೆ 5 ಘಂಟೆಯಿದ ಹೋಮ ಹಾಗೂ ಸ್ವಾಮಿಯವರ ಅಷ್ಟೋತ್ತರ, ಪಂಚ ಸಪ್ತ ಕುಂಭಾಭಿಷೇಕ, ಅಲಂಕಾರ ಸೇವೆ, ಮಹಾನೈವೇದ್ಯ, ಪೂರ್ಣಾಹುತಿ, ರಾಷ್ಟ್ರಾಶೀರ್ವಾದ ಶಾತುಮರ್ೈ ಸೇವೆಗಳು, ಸ್ವಾಮಿಯುವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು.

ಮದ್ಯಾಹ್ನ 12 ಘಂಟೆಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು. ಈ ಭಾರಿ ಬೆಳ್ಳಿಗ್ಗೆ 11 ಗಂಟೆಗೆ ಹಮ್ಮಿಕೊಂಡಿದ್ದ ಅನ್ನಸಂತರ್ಪಣೆಯು ರಾತ್ರಿ 8.00 ಘಂಟೆ ತನಕ ನಡೆದಿದ್ದು ಸಾವಿರಾರು ಭಕ್ತಾದಿಗಳು ಊಟ ಮಾಡಿದರು.

ಶ್ರೀಆಂಜನೇಯಸ್ವಾಮಿ ಸೇವಾ ಸಮಿತಿಯಿಂದ ವಾರ್ಷಿಕ ಮಹಾಸಭೆಯನ್ನು ನೆಡಸಲಾಯಿತು.

ಹಿಂದಿನ ದಿನವಾದ ಗುರುವಾರ ಸಂಜೆ ಚೌಡಸಂದ್ರ ಗ್ರಾಮದಲ್ಲಿ ಗ್ರಾಮಕ್ಕೆ ಶಾಂತಿ ಲಭಿಸಲೆಂದು ಶ್ರೀ ಆಂಜನೇಯ ಸ್ವಾಮಿಯ 150 ಕೆಜಿ ತೂಕದ ಉತ್ಸವ ಮೂರ್ತಿಯ ಉತ್ಸವವನ್ನು ನೆಡೆಸಲು ಜಡಿಮಳೆ ಪ್ರಯುಕ್ತ ಸಾದ್ಯವಾಗದ್ದರಿಂದ ದೇವಾಲಯದ ಮುಂಭಾಗದಲ್ಲೆ ಗ್ರಾಮಸ್ಥರು ಪೂಜೆ ಸಲ್ಲಿಸಲು ಅನವು ಮಾಡಿ ಕೊಡಲಾಗಿತ್ತು.

ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಎಂ.ಅಪ್ಪಯ್ಯಣ್ಣ, ಖಜಾಂಚಿ ಹೆಚ್.ಎನ್.ಆಂಜಿನಪ್ಪ, ಕಾರ್ಯದರ್ಶಿ ಎ.ದೇವರಾಜು, ಮೇಲೂರು ಬಿ.ಎನ್.ಸಚಿನ್, ದೇವಾಲಯದ ಅರ್ಚಕರಾದ ವೇಣುಗೋಪಾಲಚಾರ್, ಸಿ.ವಿ.ಶ್ಯಾಮಸುಂದರ್, ಎಪಿಎಂಸಿ ಮಾಜಿ ಅಧ್ಯಕ್ಷ ಹುಜಗೂರು ರಾಮಣ್ಣ, ನಿವೃತ್ತ ತಹಶೀಲ್ದಾರ್ ರಾಜರತ್ನಂ, ತಾಳಹಳ್ಳಿ ಮುನಿಯಪ್ಪ, ಮಾಜಿ ಕಾರ್ಯದರ್ಶಿ ದೊಡ್ಡನಾಗಪ್ಪ, ಅಗಲಗುರ್ಕಿ ಚಿಕ್ಕಬಳ್ಳಾಪುರ ಬಿಜೆಪಿ ಮಾಜಿ ತಾಲ್ಲೂಕುಅಧ್ಯಕ್ಷ ಚಂದ್ರಶೇಖರ್,ಆನೂರು ವಿಜಯೇಂದ್ರ, ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕರಾದ ಆನಂದ್ ಆಹಾರ ನಿರೀಕ್ಷಕರಾದ ಪ್ರಕಾಶ್ ಮತ್ತಿತರರು ಪಾಲ್ಗೊಂಡಿದ್ದರು.

## ಯಾರನ್ನು ಬಿಡುವುದಿಲ್ಲ

**ಮೊದಲ ಪುಟದಿಂದ:**

ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಕ ಪಿಪಿಇ ಕಿಟ್ ಹಾಗೂ ಎನ್-95 ಮಾಸ್ಕ್ ಗಳನ್ನು ಖರೀದಿ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಹಲವು ಅಪರಾಧಗಳು ಮೇಲ್ನೋಟಕ್ಕೆ ಕಂಡುಬಂದಿವೆ ಎಂದು ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಇಲಾಖೆಯ ಮೂಲಕ ಕೋವಿಡ್- 19ರ ಕಾಲಾವಧಿಯಲ್ಲಿ 15,51,713 ಪಿಪಿಇ ಕಿಟ್ (203 ಕೋಟಿ ಮೊತ್ತ) ಹಾಗೂ 9.75 ಕೋಟಿ ಮೊತ್ತದ 42,15,047 ಎನ್ 95 ಮಾಸ್ಕ್‌ಗಳನ್ನು ಸಂಗ್ರಹ ಮಾಡಿಕೊಂಡು ಸ್ವಂತ ಲಾಭಕ್ಕೆ ಬಳಕೆ ಮಾಡಿಕೊಂಡಿರುವುದು ಕಂಡುಬಂದಿತ್ತು ಎಂದು ದೂರಿನಲ್ಲಿ ವಿವರಿಸಲಾಗಿದೆ.ರಾಜ್ಯ ಸರ್ಕಾರ ಕಾನೂನಾತ್ಮಕ, ಆಡಳಿತಾತ್ಮಕ ಅನುಮೋದನೆ ನೀಡಿ 2,59,263 ಎನ್- 95 ಮಾಸ್ಕ್ ಮತ್ತು 2,59,263 ಪಿಪಿಇ ಕಿಟ್ ಒಟ್ಟು 41.35 ಕೋಟಿ ಮೊತ್ತದ ಸಾಮಾಗ್ರಿಗಳನ್ನು ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗೆ 17 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬಳಸಲು ಅನುಮೋದನೆ ನೀಡಲಾಗಿತ್ತು. 41.35 ಕೋಟಿ ಮೌಲ್ಯದ ಮೇಲೆ ಹೋಗಬಾರದು ಎಂದು ಷರತ್ತು ವಿಧಿಸಲಾಗಿತ್ತು. ಆದರೆ, ನಿಯಮ ಉಲ್ಲಂಘಿಸಿರುವುದು ಕಂಡುಬಂದಿದೆ ಎಂದು ದೂರು ನೀಡಲಾಗಿದೆ.

ಹೆಚ್ಚುವರಿ ಪಿಪಿಇ ಕಿಟ್‌ಗಳನ್ನು ಟೆಂಡರ್ ಇಲ್ಲದೇ ಖರೀದಿಸಿರುವುದು ಹಾಗೂ ಪೂರ್ಣ ಪ್ರಮಾಣದ ಹಣವನ್ನು ಕೇವಲ ಪಿಪಿಇ ಕಿಟ್‌ಗಳಿಗೇ ವಿನಿಯೋಗಿಸಿರುವುದು ಕಂಡುಬಂದಿದೆ. 7 ಕೋಟಿ ಮೊತ್ತದಲ್ಲಿ 55,784 ಪಿಪಿಇ ಕಿಟ್‌ಗಳನ್ನು ಕಾನೂನು ಬಾಹಿರವಾಗಿ ಖರೀದಿಸಲಾಗಿದೆ ಎಂದು ಕಂಡುಬಂದಿದೆ ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

13,784 ಪಿಪಿಇ ಕಿಟ್‌ಗಳನ್ನು ಯಾವುದೇ ಸರಬರಾಜು ಆದೇಶವಿಲ್ಲದೇ ಖರೀದಿ ಮಾಡಲಾಗಿದೆ. ಆ ಕಿಟ್ ಎಲ್ಲಿಗೆ ನೀಡಲಾಗಿದೆ ಎಂಬುದಕ್ಕೆ ದಾಖಲೆ ಇಲ್ಲ ಎಂದು ವಿವರಿಸಲಾಗಿದೆ.ಮಂಡ್ಯ ಹಾಗೂ ಬೆಳಗಾವಿಯ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ನೀಡಿದ್ದ 80 ಸಾವಿರ ಪಿಪಿಇ ಕಿಟ್‌ಗಳನ್ನು ಬಳಸದೇ ಹಾಗೆಯೇ ಬಿಟ್ಟು 9.99 ಕೋಟಿ ಸರ್ಕಾರಕ್ಕೆ ನಷ್ಟ ಉಂಟು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಲಾಜ್ ಎಕ್ಸ್‌ಪೋರ್ಟ್ ಹಾಗೂ ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್‌ನವರು ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅರ್ಹರಲ್ಲದಿದ್ದರೂ ದೊಡ್ಡ ಪ್ರಮಾಣದಲ್ಲಿ ಟೆಂಡರ್ ನೀಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

**ಮಾಸ್ಕ್, ಪಿಪಿಇ ಕಿಟ್ ಹೆಚ್ಚು ಖರೀದಿ:** ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿದ್ದು ಮೆ. ಲಾಜ್ ಎಕ್ಸ್‌ಪೋರ್ಟ್ ಸಂಸ್ಥೆ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಿಲ್ಲದಿದ್ದರೂ ಮತ್ತು ಯೋಗ್ಯರಿಲ್ಲದಿದ್ದರೂ ಇವರಿಗೆ ದೊಡ್ಡ ಪ್ರಮಾಣದ ಟೆಂಡರ್ ನೀಡಲಾಗಿದೆ. ಎನ್-95 ಮಾಸ್ಕ್ ಮತ್ತು ಪಿಪಿಇ ಕಿಟ್ ಅನ್ನೇ ಹೆಚ್ಚಾಗಿ ಖರೀದಿ ಮಾಡಿದ್ದು, ಈ ಖರೀದಿಯ ಪೂರ್ಣ ಮೊತ್ತವನ್ನು ಟೆಂಡರ್‌ನಲ್ಲಿ ಭಾಗವಹಿಸದೇ ಇರುವ ಸಂಸ್ಥೆಣಟಿಜಜಜಿಟಿಜಜಯಾದ ಪ್ರೂಡೆಂಟ್ ಮ್ಯಾನೇಜೆಮೆಂಟ್ ಸಲ್ಯೂಷನ್ಸ್ ಸಂಸ್ಥೆಗೆ ಹಣವನ್ನು ಪಾವತಿಸಲಾಗಿದೆ ಎಂಬುದು ಕಂಡುಬಂದಿರುವುದಾಗಿ ಮೂಲಗಳು ಹೇಳಿವೆ.

**ಎಸ್‌ಐಟಿ ರಚನೆ:** ಕೋವಿಡ್- 19 ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಎಸ್‌ಐಟಿ (ವಿಶೇಷ ತನಿಖಾ ದಳ) ರಚಿಸಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕಳೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿತ್ತು. ಹಿರಿಯ ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿ ಶನಿವಾರ ಅಥವಾ ಭಾನುವಾರ ರಚನೆ ಆಗಲಿದೆ. ವಿಧಾನಸೌಧ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವನ್ನು ಎಸ್‌ಐಟಿಗೆ ವರ್ಗಾವಣೆ ಮಾಡಲಾಗುವುದು ಎಂದು ಮೂಲಗಳು ಹೇಳಿವೆ.

ಇನ್ನೂ ರಾಯಚೂರು ಜಿಲ್ಲೆಯಲ್ಲಿ ಬಾಣಂತಿಯರ ಸರಣಿ ಸಾವು ಪ್ರಕರಣಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಈ ಕುರಿತು ಪ್ರತಿಕ್ರಿಯೆ ನೀಡಿ ಈ ವಿಷಯ ನನ್ನ ಗಮನಕ್ಕೆ ಬಂದ ತಕ್ಷಣ ನಾನು ಸಿಂಧನೂರಿಗೆ ಭೇಟಿ ನೀಡಿದ್ದೇನೆ. ಟೆಸ್ಟ್ ಸ್ಯಾಂಪಲ್ ವರದಿಯ ಬಳಿಕ ಆರೋಗ್ಯ ಸಚಿವರು ಈ ಕುರಿತು ಉತ್ತರ ನೀಡುತ್ತಾರೆ. ಸೋಮವಾರ ಸದನದಲ್ಲಿ ಆರೋಗ್ಯ ಇಲಾಖೆಯ ಸಚಿವರು ಉತ್ತರ ನೀಡುತ್ತಾರೆ.

ಇನ್ನೂ ರಿಮ್ಸ್ ಆಸ್ಪತ್ರೆಯಲ್ಲಿ ಐವರು ಬಾಣಂತಿಯರ ಸಾವು ಪ್ರಕರಣ ಗೊತ್ತಿಲ್ಲ. ರಿಮ್ಸ್ ಆಸ್ಪತ್ರೆಯಲ್ಲಿ ರಿಂಗರ್ ಐವಿ ಬಳಕೆ ಮಾಡಿಲ್ಲ. ಮುಖ್ಯಮಂತ್ರಿ ಈಗಾಗಲೇ ಒಂದು ಕಮಿಟಿ ರಚನೆ ಮಾಡಿ ತನಿಖೆಗೆ ಆದೇಶಿಸಿದ್ದಾರೆ. ಸಿಂಧನೂರಿನ ಬಗ್ಗೆ ಮಾತ್ರ ಮಾಹಿತಿ ಇದೆ. ಆದರೆ ಉಳಿದ ವಿಚಾರ ನನಗೆ ಗೊತ್ತಿಲ್ಲ. ತನಿಖಾವ ವರದಿ ಪರಿಶೀಲನೆ ಮಾಡಿದ ಬಳಿಕ ಪರಿಹಾರ ನೀಡುವ ಬಗ್ಗೆ ತೀರ್ಮಾನಿಸಲಾಗುತ್ತದೆ ಎಂದು ತಿಳಿಸಿದರು.

## ವಿಜೃಂಭಣೆಯ ಆಚರಣೆ ಬೇಡ

ತಾವುಗಳು ಇದ್ದಲ್ಲಿಂದಲೇ ನನ್ನನ್ನು ಹರಸಿ, ಆಶೀರ್ವದಿಸಿ. ಅಷ್ಟು ಸಾಕು ನನಗೆ. ಸಾಧ್ಯವಾದರೆ ಸಮಾಜಕ್ಕೆ, ದುರ್ಬಲ ಜನರಿಗೆ ಏನಾದರೂ ಸಹಾಯ ಮಾಡಿ. ಜನಸೇವೆ ಜಾತ್ಯತೀತ ಜನತಾದಳ ಪಕ್ಷದ ಮೂಲತತ್ವ. ಅದೇ ನನಗೆ ತಾವು ನನಗೆ ಕೊಡುವ ಉಡುಗೊರೆ ಎಂದು ಕಾರ್ಯಕರ್ತರಲ್ಲಿ ಅವರುಮನವಿ ಮಾಡಿದ್ದಾರೆ.

## ಮೊದಲ ಪುಟದಿಂದ

### ನಾಗರಾಜ್ ನೇಮಕ

ಪತ್ರಿಕಾಗೋಷ್ಠಿಯಲ್ಲಿ ಮಠದ ಟ್ರಸ್ಟಿಗಳಾದ ದೊಡ್ಡಮನೆ ವೆಂಕಟೇಶ, ಆಡಿಟರ್ ನಾಗರಾಜ್, ಪಂಚಲಿಂಗಯ್ಯ, ಶಿವಲಿಂಗಯ್ಯ, ಮಾರಪ್ಪಣ್ಣ, ವಕೀಲರಾದ ಸಿದ್ದರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**.ನಾಗರಾಜ್ ಅವರ ಹಿನ್ನೆಲೆ :** ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಹೊನ್ನೆನಹಳ್ಳಿ ಗ್ರಾಮದ ಲಿಂಗಯ್ಯ ಮತ್ತು ಗಂಗಮನವರ ಸುಪುತ್ರರಾಗಿರುವ ಎಚ್.ಎಲ್.ನಾಗರಾಜ್= ಅವರು ಬಾಲ್ಯದ ಪ್ರಾಥಮಿಕ ಶಿಕ್ಷಣವನ್ನು ತುಮಕೂರಿನ ಸಿದ್ದಗಂಗಾ ಮಠದಲ್ಲಿ ಮುಗಿಸಿದ್ದಾರೆ. ನಂತರ ಪದವಿ ಮುಗಿಸಿ, ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಮೈಕ್ರೊಫೈನಾನ್ಸ್ ನಲ್ಲಿ ಸಂಶೋಧನೆ ಮಾಡಿದ್ದಾರೆ. ಸಿದ್ದಗಂಗಾ ಮಠದಲ್ಲಿ ವ್ಯಾಸಂಗ ಮಾಡುವಾಗಿನಿಂದಲೂ ನಾಗರಾಜ್ ಅವರಿಗೆ ಧಾರ್ಮಿಕ ಕಾರ್ಯಗಳ ಕುರಿತು ಆಸಕ್ತಿ ಬೆಳೆದಿತ್ತು. ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರನ್ನು ಆದರ್ಶವಾಗಿ ತೆಗೆದುಕೊಂಡಿದ್ದರು. ಶಿಕ್ಷಣ ಮುಂದುವರೆಸಿ ಸ್ಪರ್ಧಾತಕ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವಾಗ ಅವರು ಆದಿಚುಂಚನಗಿರಿ ಮಠದ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದರು. ಈ ಅವಧಿಯಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸೇವಾ ಕಾರ್ಯಗಳಿಂದ ಪ್ರಭಾವಿತರಾದರು. ಸನ್ಯಾಸತ್ವ ಮತ್ತು ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಸೇವಾ ಕಾರ್ಯ ಮಾಡಬೇಕು ಎನ್ನುವ ಮನಸ್ಸು ಮಾಡಿದರು. ತಹಸೀಲ್ದಾರ್ ಆಗಿ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ, ಮೈಶುಗರ್ ಕಾರ್ಖಾನೆಯ ಎಂ.ಡಿ. ಆಗಿ ಕೆಲಸ ಮಾಡಿರುವ ನಾಗರಾಜ್ ಅವರ ಪ್ರಾಮಾಣಿಕತೆ, ದಕ್ಷತೆ ಮತ್ತು ಜನಸೇವಾ ಮನೋಭಾವವನ್ನು ರೂಢಿಸಿಕೊಂಡಿದ್ದಾರೆ ಎಂದು ಮಠದ ಟ್ರಸ್ಟಿಗಳು ಉತ್ತರಾಧಿಕಾರಿಯವರ ಕುರಿತಾದ ಹಿನ್ನೆಲೆ ಹಂಚಿಕೊಂಡರು.

### ಆಸ್ಪತ್ರೆಗೆ ದಾಖಲು

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಕಳೆದ ಕೆಲವು ತಿಂಗಳಲ್ಲಿ ಅಡ್ವಾಣಿ ಅವರು ನಾಲ್ಕನೇ ಬಾರಿಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಮಾಜಿ ಗೃಹ ಸಚಿವರಾಗಿದ್ದ ಅವರಿಗೆ ಈ ವರ್ಷ ಅತ್ಯುನ್ನತ ನಾಗರಿಕ ಗೌರವ 'ಭಾರತ ರತ್ನ'ವನ್ನು ನೀಡಲಾಯಿತು. ರಾಷ್ಟ್ರಪತಿ ಭವನದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಹಿರಿಯ ನಾಯಕ ಅಡ್ವಾಣಿ ಅವರಿಗೆ ಭಾಗವಹಿಸಲು ಸಾಧ್ಯವಾಗದ ಕಾರಣ, ಅವರ ಮನೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು.ಲಾಲ್ ಕೃಷ್ಣ ಅಡ್ವಾಣಿ ಬಿಜೆಪಿಯ ಸಂಸ್ಥಾಪಕರಲ್ಲಿ ಒಬ್ಬರು ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸದಸ್ಯ. 1990 ರ ಸೆಪ್ಟೆಂಬರ್‌ನಲ್ಲಿ ರಾಮ ಮಂದಿರದ ಪರವಾಗಿ ಬೆಂಬಲ ಕ್ರೋಢೀಕರಿಸಲು ಸೋಮನಾಥದಿಂದ ಆರಂಭಿಸಿದ್ದ ರಥಯಾತ್ರೆ ಆರಂಭಿಸಿ ಜನಪ್ರಿಯ ರಾದವರು.

### ಬಿಗಿ ಬಂದೋಬಸ್ತ್

ಮುಖಂಡ, ನಮ್ಮ ಪ್ರತಿಭಟನೆಯೂ 307ನೇ ದಿನ ತಲುಪಿದ್ದು, 101 ರೈತರು ಇಂದು ದೆಹಲಿಯತ್ತ ಪ್ರಯಾಣಿಸುತ್ತಾರೆ. ಇಡೀ ದೇಶ ನಮ್ಮ ಹೋರಾಟಕ್ಕೆ ಬೆಂಬಲ ನೀಡಿದೆ. ಆದರೆ, ಪ್ರಧಾನಿ ಮತ್ತು ಕೇಂದ್ರ ಕೃಷಿ ಸಚಿವರು ನಮ್ಮ ಜೊತೆ ಮಾತನಾಡದೇ ಅಂತರ ನಿರ್ವಹಣೆ ಮಾಡುತ್ತಿದ್ದಾರೆ. ನಮ್ಮ ಮೆರವಣಿಗೆ ಸಾಗದಂತೆ ಸರ್ಕಾರ ಕೂಡ ಕಾರ್ಯ ನಿರ್ವಹಿಸುತ್ತಿದೆ. ಆದರೆ, ನಮ್ಮ ಈ ಹೋರಾಟಕ್ಕೆ ಬೆಂಬಲ ನೀಡುವಂತೆ ಮನವಿ ಮಾಡುತ್ತೇನೆ ಎಂದರು.

**ಗಡಿಯಲ್ಲಿ ಬಿಗಿ ಭದ್ರತೆ:** ಹರಿಯಾಣ ಪಂಜಾಬ್ ಮತ್ತು ದೆಹಲಿ ಗಡಿಯಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಹರಿಯಾಣ ಪೊಲೀಸರು ಅಂಬಲಾದ ಶಂಭು ಗಡಿಯಲ್ಲಿ ಹಲವು ಹಂತದ ಬ್ಯಾರಿಕೇಡ್ ಹಾಕಿದ್ದು, ಮತ್ತು ಕಾಂಕ್ರಿಟ್ ಗೋಡೆ ನಿರ್ಮಾಣ ಮಾಡುವ ಮೂಲಕ ರೈತರು ಮುಂದೆ ಸಾಗದಂತೆ ತಡೆಯಬಹುದು.

**ಇಂಟರ್‌ನೆಟ್ ಸ್ಥಗಿತ:** ದೆಹಲಿಯತ್ತ ರೈತರ ಮೆರವಣಿಗೆ ಸಾಗುವ ಹಿನ್ನೆಲೆಯಲ್ಲಿ ಅಂಬಲಾದಲ್ಲಿ ಇಂಟರ್‌ನೆಟ್ ಸೇವೆಯನ್ನು ಇಂದು ಮಧ್ಯ ರಾತ್ರಿಯಿಂದಲೇ ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದೆ. ಡಿಸೆಂಬರ್ 17ರವರೆಗೆ ಇಂಟರ್‌ನೆಟ್ ಸೇವೆ ಇರುವುದಿಲ್ಲ.

**ದತಾಸಿಂಗ್ ವಾಲಾ ಗಡಿಯಲ್ಲೂ ಭದ್ರತೆ:** ಜಿಂದ್ ಮತ್ತು ಪಂಜಾಬ್‌ನ ದತಾಸಿಂಗ್ ವಾಲಾ ಗಡಿಯಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ದತಾಸಿಂಗ್ ವಾಲಾ ಗಡಿಯನ್ನು ತಾತ್ಕಲಿಕವಾಗಿ ಮುಚ್ಚಲಾಗಿದೆ. ದೆಹಲಿಗೆ ರೈತರ ಮೆರವಣಿಗೆ ಹಿನ್ನೆಲೆಯಲ್ಲಿ ಪಡೆಗಳ ನಿಯೋಜನೆಯನ್ನು ಹೆಚ್ಚಿಸಲಾಗಿದೆ. ಭದ್ರತೆ ದೃಷ್ಟಿಯಿಂದ ಉಜಾನಾ ಮತ್ತು ನರ್ವಾನಾ ಸಿರ್ಸಾ ಬ್ರಾಂಚ್ ಕಾಲುವೆಗಳಲ್ಲಿ ಕೂಡ ತಡೆ ನಿರ್ಮಾಣ ಮಾಡಲಾಗಿದೆ.

ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ್ ನವೆಂಬರ್ 26 ರಿಂದ ಆಮರಣಾಂತ ಉಪವಾಸ ನಡೆಸುತ್ತಿದ್ದು, ಅವರ ಆರೋಗ್ಯ ಸ್ಥಿತಿ ಹದಗೆಟ್ಟಿದೆ. ಕಳೆದ 19 ದಿನದಂದ ಅವರು ಆಹಾರ ತ್ಯಜಿಸಿದ್ದಾರೆ. ಅವರ ಉಪವಾಸಕ್ಕೆ ಭಾರತೀಯ ಕಿಸಾನ್ ಯೂನಿಯನ್ (ಟಿಕಾಯತ್) ಬೆಂಬಲಿಸಿದೆ. ರಾಕೇಶ್ ಟಿಕಾಯತ್ ಇಂದು ಖಾನೌರಿ ಗಡಿಯಲ್ಲಿ ಜಗಜಿತ್ ಸಿಂಗ್ ದಲ್ಲೆವಾಲ್ ಅವರನ್ನು ಭೇಟಿಯಾಗಲಿದ್ದಾರೆ.

### ಮೊಯಿತ್ರಾ ವಾಗ್ದಾಳಿ

ತನ್ನ ಭಾಷಣದ ಗಮನಾರ್ಹ ಭಾಗಕ್ಕಾಗಿ, ತಣಮೂಲ ಕಾಂಗ್ರೆಸ್ ಸಂಸದೆ ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಅವರ ಮೇಲೆ ವಾಗ್ದಾಳಿ ನಡೆಸಿದರು. ಅವರನ್ನು ಹೆಸರಿಸದೆ, ಮತ್ತು ವಿರೋಧ ಪಕ್ಷದ ತೊಂದರೆ ಏನೆಂದರೆ, ಕೆಲವು ಉನ್ನತ ನ್ಯಾಯಾಂಗದ ಸದಸ್ಯರು ರಾಜಿ ಮಾಡಿಕೊಳ್ಳಲು ತಮ ಕೈಲಾದಷ್ಟು ಪ್ರಯತ್ನಿಸುತ್ತಿರುವಂತೆ ತೋರುತ್ತಿದೆ. ದೇಶದ ಸಾಂವಿಧಾನಿಕ ನ್ಯಾಯಾಲಯಗಳ ಸ್ವಾತಂತ್ರ್ಯ ಮತ್ತು ಸಮಗ್ರತೆ ಕಾಪಾಡಿಕೊಳ್ಳಬೇಕಿದೆ ಎಂದರು.

ಸುಪ್ರಿಂ ರಾಜಕೀಯ ಪ್ರತಿಪಕ್ಷದಂತೆ ವರ್ತಿಸಲು ಉದ್ದೇಶಿಸಿಲ್ಲ ಎಂದು ಮಾಜಿ ಸಿಜೆಐ ಹೇಳಿಕೆ ನೀಡಿದ್ದಾರೆ ಎಂದು ಮೊಯಿತ್ರಾ ಹೇಳಿದರು. ವಿರೋಧ ಪಕ್ಷದಲ್ಲಿರುವ ನಮಗೆ ನಮ ಕೆಲಸವನ್ನು ಮಾಡಲು ಸುಪ್ರಿಂ ಕೋರ್ಟ್ ಅಗತ್ಯವಿಲ್ಲ. ನಾವು ಅದನ್ನು ಕೇಳುತ್ತಿಲ್ಲ ಆದರೆ ನಮಗೆ ತೊಂದರೆ ಏನೆಂದರೆ ಉನ್ನತ ನ್ಯಾಯಾಂಗದ ಕೆಲವು ಸದಸ್ಯರು ಸ್ವಾತಂತ್ರ್ಯ ಮತ್ತು ಸಮಗ್ರತೆಗೆ ರಾಜಿ ಮಾಡಿಕೊಳ್ಳಲು ತಮ ಕೈಲಾದಷ್ಟು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

# ಯುವಕರ ಕಲಾಪ್ರತಿಭೆ ಹೊರತರಲು ಯುವಜನೋತ್ಸವ ಸಹಕಾರಿ



**ಚಾಮರಾಜನಗರ:** ಯುವಜನರಲ್ಲಿರುವ ಕಲಾಪ್ರತಿಭೆಯನ್ನು ಹೊರತರಲು ಯುವಜನೋತ್ಸವ ಸಹಕಾರಿಯಾಗಿದೆ ಎಂದು ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ ಅವರು ತಿಳಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನೆಹರು ಯುವ ಕೇಂದ್ರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾಮಟ್ಟದ ಯುವಜನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವಕರಲ್ಲಿ ನಾನಾ ಬಗೆಯ ಕಲಾಪ್ರಕಾರಗಳಿವೆ. ಅವುಗಳನ್ನು ಹೊರಜಗತ್ತಿಗೆ ಪರಿಚಯಿಸುವ ಮೂಲಕ ಯುವಜನತೆಯನ್ನು ಪ್ರೋತ್ಸಾಹಿಸಲು ಸರ್ಕಾರವು ನಿರಂತರವಾಗಿ ಪ್ರತಿವರ್ಷ ಯುವಜನಮೇಳಗಳನ್ನು ಆಯೋಜಿಸುತ್ತಿದೆ. ಜಿಲ್ಲೆ, ರಾಜ್ಯಮಟ್ಟದಲ್ಲಿ ಗೆದ್ದು ಜಿಲ್ಲೆಗೆ ಕೀರ್ತಿ ತರಬೇಕು. ಹಾಗೆಯೇ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಳ್ಳಲು ಸಂಕಷ್ಟದಲ್ಲಿರುವ ಯುವಜನರಿಗೆ ಸರ್ಕಾರ ಅಗತ್ಯ ನೆರವು ನೀಡಬೇಕಾಗಿದೆ ಎಂದು ಮುನ್ನಾ ಅವರು ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ಸಮಿತಿ ಸದಸ್ಯರಾದ ಶ್ರೀನಿವಾಸಪ್ರಸಾದ್ ಮಾತನಾಡಿ ವಿವಿಧ ಸ್ಪರ್ಧೆಗಳ ಮೂಲಕ ಜಿಲ್ಲೆಯ ಯುವಕ, ಯುವತಿಯರನ್ನು ಮುಖ್ಯವಾಹಿನಿಗೆ ತರಲು ಯುವಜನೋತ್ಸವ ಆಯೋಜಿಸಿ ಜಿಲ್ಲಾಡಳಿತ ಉತ್ತಮ ಪ್ರಯತ್ನ ಮಾಡುತ್ತಿದೆ. ಯುವಜನತೆ ಸತತ ಪರಿಶ್ರಮದ ಮೂಲಕ ತಮ್ಮಲ್ಲಿರುವ ಕಲಾಪ್ರತಿಭೆ ಅನಾವರಣಗೊಳಿಸಲು ಮುಂದಾಗಬೇಕು ಎಂದರು.

ಕರ್ನಾಟಕ ಜಾನಪದ ಅಕಾಡಮಿ ಸದಸ್ಯರಾದ ದೇವಾನಂದ್ ವರಪ್ರಸಾದ್ ಅವರು ಆಧುನೀಕತೆ, ಜಾಗತೀಕರಣದಿಂದ ಈ ನೆಲದ ಜನಪದ ಸಂಸ್ಕೃತಿ ಮರೆಯಾಗುತ್ತಿದೆ. ಯುವಕರು ತಮ್ಮನ್ನು ತಾವು ಅರಿಯಲು ಯುವಜನೋತ್ಸವ ವೇದಿಕೆಯಾಗಲಿದೆ. ಶಿಸ್ತು, ಸಂಯಮ, ಕ್ರೀಯಾಶೀಲ ಚಿಂತನೆ, ವ್ಯಕ್ತಿತ್ವ ವಿಕಸನಕ್ಕೆ ಯುವಜನೋತ್ಸವ ನೆರವಾಗಲಿದೆ. ಯುವಕರು ಇದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕಿವಿಮಾತು ಹೇಳಿದರು.

ಸಾಹಿತಿ, ಚಿಂತಕರು ಹಾಗೂ ಬರಹಗಾರರಾದ ಮಹದೇವ ಶಂಕನಪುರ ಅವರು ಮಾತನಾಡಿ ಇಂದಿನ ವಿದ್ಯಾರ್ಥಿಗಳು ಬರೀ ಓದುವುದಷ್ಟೆ ಅಲ್ಲ. ಸಾಹಿತ್ಯ, ಕವಿತೆ ರಚನೆ, ಹಾಡು ಬರೆಯುವುದು, ನಾಟಕಗಳಲ್ಲಿ ಅಭಿನಯಿಸುವಂತಹ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗಿದೆ. ಕನ್ನಡದ ವರನಟ ಡಾ. ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಈ ನೆಲದ ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಅವರ ಮಾದರಿಯಲ್ಲಿಯೇ ಇಂದಿನ ಯುವಜನತೆ ಮುನ್ನೆಡೆಯಬೇಕು ಎಂದು ತಿಳಿಸಿದರು.

ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದ ನೆಹರು ಯುವ ಕೇಂದ್ರದ ನಿವೃತ್ತ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಎಂ.ಎನ್. ನಟರಾಜು ಅವರು ಮಾತನಾಡಿ ಚಾಮರಾಜನಗರ ಜಿಲ್ಲೆ ಯುವ ಪ್ರತಿಭೆಗಳ ಕಣಜವಾಗಿದೆ. ಯುವಜನ ಮೇಳದಿಂದ ಸಾಕಷ್ಟು ಕಲಾವಿದರು ಉದ್ಭವಿಸಲಿದ್ದಾರೆ. ಕಲಾಪ್ರತಿಭೆಗಳಿಗೆ ಯುವಜನೋತ್ಸವ ವೇದಿಕೆಯಾಗಿದೆ. ಯುವಕರು ಈ ದೇಶದ ಶಕ್ತಿ ಆಗಿರುವುದರಿಂದ ಪ್ರತಿವರ್ಷ ಯುವಜನೋತ್ಸವ ನಡೆಯುತ್ತಿದೆ. ದೇಶ ಕಟ್ಟುವಲ್ಲಿ ಇದು ಉತ್ತಮ ಬೆಳವಣಿಗೆಯಾಗಿದೆ. ಯುವಪ್ರತಿಭೆಗಳನ್ನು ಗುರುತಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆಧುನೀಕತೆಯ ಸೊಗಡಿನಲ್ಲಿ ನಶಿಸುತ್ತಿರುವ ಗ್ರಾಮೀಣ ಜನಪದ ಸ್ಪರ್ಧೆಗಳನ್ನು ಪುನಶ್ಚೇತನಗೊಳಿಸಲು ಯುವಜನೋತ್ಸವ ನೆರವಾಗಬೇಕು ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಶಿವಸ್ವಾಮಿ, ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತರಾದ ಕಾಳಿಂಗಸ್ವಾಮಿ, ಚಾಮರಾಜನಗರ ವಿ.ವಿ. ಜಾನಪದ ಉಪನ್ಯಾಸಕರಾದ ಶಿವರಾಜು, ಜೆ.ಎಸ್.ಎಸ್. ಬಿ.ಇಡಿ ಕಾಲೇಜಿನ ಉಪನ್ಯಾಸಕರಾದ ನಟೇಶ್, ಜನಪದ ಗಾಯಕರಾದ ಸಿ.ಎಂ. ನರಸಿಂಹಮೂರ್ತಿ, ಸುರೇಶ್‌ನಾಗ್, ಸೋಮಹಳ್ಳಿ ನಾಗರಾಜು, ಚಿತ್ರಕಲಾವಿದರಾದ ಮಧು, ಕಥೆಗಾರರಾದ ಶೀಲಾ ಸತ್ಯೇಂದ್ರಸ್ವಾಮಿ, ಇತರರು ಉಪಸ್ಥಿತರಿದ್ದರು.

## ಶ್ರೀ ವೆಂಕಟೇಶ್ವರ ದರ್ಶನಕ್ಕೆ ಭಾಗಿಯಾದ ಸಾವಿರಾರು ಭಕ್ತಾದಿಗಳು





**ನಾಗಮಂಗಲ:** ಚಿಕ್ಕ ತಿರುಪತಿ ಎಂದೆ ಪ್ರಸಿದ್ಧಿ ಪಡೆದಿರುವ ಗಿಡದ ಜಾತ್ರೆಗೆ ಸಾವಿರಾರು ಭಕ್ತಾದಿಗಳು ಆಗಮಿಸಿ ಶ್ರೀ ವೆಂಕಟೇಶ್ವರನ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾದರು.

ನಾಗಮಂಗಲ ತಾಲೂಕು ದೇವಲಾಪುರ ಹೋಬಳಿಯ ನಾಗನಕೆರೆ ಬಳಿ ಇರುವ ಗಿಡದ ಜಾತ್ರೆ ಇಂದು ಅದ್ದೂರಿಯಾಗಿ ಸಾವಿರಾರು ಭಕ್ತಾದಿಗಳು ಹರಿ ಭಕ್ತರು ಭಾಗವಹಿಸಿದ್ದರು.


ಎರಡನೇ ಚಿಕ್ಕ ತಿರುಪತಿ ಎಂದು ಪ್ರಸಿದ್ಧಿಯಾದ ಗಿಡದ ಜಾತ್ರೆ ಇಂದು ಬೆಳಿಗ್ಗೆಯಿಂದಲೇ ತುಂತುರು ಮಳೆಯಲ್ಲಿ ತಂಡೋಪ ತಂಡವಾಗಿ ದಾಸಪ್ಪರು ಆಗಮಿಸುತ್ತಿದ್ದು ಅವರವರ ದೇವನಂಬಿಕೆಗೆ ಕೆರೆ ಭಾಗದಲ್ಲಿ ವೆಂಕಟೇಶ್ವರ ಪೂಜೆ ಮುಖ ಸಿರಿ ಇಟ್ಟು ಗೋವಿಂದನ ಕೂಗು ಭಕ್ತಾದಿಗಳು ಕಾಣಿಕೆ ಇಟ್ಟು ಪೂಜೆ ಸಲ್ಲಿಸುತ್ತಿದ್ದು ವಿಶೇಷವಾಗಿತ್ತು.

ಬೆಟ್ಟದ ಗುಡಿಯ ದೇವಾಲಯದಲ್ಲಿ ಭಕ್ತಾದಿಗಳು ತಿರುಪತಿಯಂತೆ ಭಕ್ತಾದಿಗಳಿಗೆ ವೆಂಕಟೇಶ್ವರನ ದರ್ಶನ ಪಡೆಯಲು ಸರತಿ ಸಾಲಿನಂತೆ ವ್ಯವಸ್ಥೆ ಹಾಗೂ ವೆಂಕಟೇಶ್ವರ ದೇವರ ಉತ್ಸವ ಮೂರ್ತಿ ತೂಗುಯ್ಯಾಲೆಯಲ್ಲಿ ಭಕ್ತಾದಿಗಳಿಗೆ ದರ್ಶನದ ವ್ಯವಸ್ಥೆ ಮಾಡಲಾಗಿತ್ತು.

ಗಿಡ ಜಾತ್ರೆಯ ಅಂಗಡಿ ಮುಗ್ಗಟ್ಟುಗಳು ಬಲು ಜೋರಾಗಿ ಸೇರಿದ್ದು ಹರಿಭಕ್ತ ದಾಸರು ಬೆಟ್ಟದಗುಡಿಯ ಮೇಲ್ಭಾಗದಲ್ಲಿಯೂ ಪೂಜೆ ಮಾಡುವ ವ್ಯವಸ್ಥೆ ಮಾಡಿದ್ದು ಭಕ್ತರಿಗೆ ಆಯಾಸವಾಗದಂತೆ ಪೂಜೆ ಮಾಡಲು ಸರಗವಾಗಿತ್ತು.

ಗಿಡದ ಜಾತ್ರೆಯು ಬೆಳಗಿನಿಂದಲೇ ಭಕ್ತರು ಆಗಮಿಸುತ್ತಿದ್ದು ಮಧ್ಯಾಹ್ನದ ನಂತರ ಜನಸಂಖ್ಯೆಯ ಸ್ತೋಮ ಆಗಮಿಸುವುದು ವಿಶೇಷವಾಗಿದೆ.

# ಹನುಮ ಜಯಂತಿ ಹಿಂದೂ ಧರ್ಮದಲ್ಲಿ ಅತ್ಯಂತ ಪವಿತ್ರ ಮಹತ್ವದ ಹಬ್ಬ



**ಕೊರಟಗೆರೆ** ; ಹನುಮ ಜಯಂತಿ ಹಿಂದೂ ಧರ್ಮದಲ್ಲಿ ಅತ್ಯಂತ ಪವಿತ್ರ ಮತ್ತು ಮಹತ್ವದ ಹಬ್ಬಗಳಲ್ಲಿ ಒಂದಾಗಿದೆ, ಹನುಮಂತನ ಜನ್ಮದಿನದಂದು ಆಚರಿಸಲಾಗುತ್ತದೆ, ಹನು ಮಂತನು ಶಕ್ತಿಯ, ಭಕ್ತಿ ಮತ್ತು ಸಮರ್ಪಣೆಯ ಸ್ವರೂಪವಾಗಿದ್ದು, ರಾಮಾಯಣದ ಮೂಲಕ ಸರ್ವರ ಮನಸ್ಸನ್ನು ಗೆದ್ದರಿವ ದೈವವಾಗಿದ್ದು ದೇಶದಲ್ಲಿ ವಿಭಿನ್ನ ರೀತಿಯಲ್ಲಿ ಆಚರಿಸಲಾಗುತ್ತದೆ ಎಂದು ಸಿದ್ದರಬೆಟ್ಟ ರಂಭಾಪುರಿ ಖಾಸಾ ಶಾಖಾ ಮಠದ ಪೀಠಾಧ್ಯಕ್ಷ ಶ್ರೀ ವೀರಭದ್ರಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಅವರು ಪಟ್ಟಣದ ಹೊರವಲಯದ ಮಾರುತಿ ನಗರ ಮೂಡ್ಲಪಣ್ಣೆಯ ಶ್ರೀ ಭೈಲಾಂಜನೇಯಸ್ವಾಮಿ ದೇವಾಲಯದಲ್ಲಿ ಏರ್ಪಡಿಸಿದ ಶ್ರೀ ಹನುಮ ಜಯಂತಿ ಮಹೋತ್ಸವ ಹಾಗೂ 25 ನೇ ವಾರ್ಷಿಕೋತ್ಸವ ಹಾಗೂ ಪಟ್ಟಣದ ಗುಂಡಾಜಂನೇಯಸ್ವಾಮಿ, ಗುಟ್ಟೆ ಆಂಜನೇಯಸ್ವಾಮಿ ದೇವಾಲಯಗಳಲ್ಲಿ ನಡೆದ ವಿಶೇಷ ಹನುಮಜಯಂತಿ ಧಾರ್ಮಿಕ ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿಸಿ ಹನುಮನಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿ ಹನುಮಂತನು ಕೇವಲ ಒಬ್ಬ ದೇವರಲ್ಲ ಹನುಮನು ಶ್ರದ್ದೆ, ದೈರ್ಯ ಮತ್ತು ನಿಶ್ವಾರ್ಥ ಸೇವೆಯನ್ನು ಮನುಷ್ಯ ಜೀವನದಲ್ಲಿ ಹೇಗೆ ಪಾಲಿಸಬೇಕೆಂಬುದಕ್ಕೆ ಆದರ್ಶ ಮಾದರಿಯಾಗಿದ್ದಾರೆ, ಹನುಮಂತನು ಅಪ್ರಮಿತ ಶಕ್ತಿ ಮತ್ತು ದೈರ್ಯದಿಂದ ಪ್ರತಿಯೊಬ್ಬರಿಗೂ ಸ್ಪೂರ್ತಿಯ ಮೂಲವಾಗಿದೆ, ಹನು ಮಂತನ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಆಳವಡಿಸಲು ಪ್ರಯತ್ನಿಸುತ್ತಾರೆ, ವಿಶೇಷವಾಗಿ ಯುವಜನತೆ ಹನುಮಂತನ ಶಕ್ತಿಯ ಸಂಕೇತವಾಗಿ ತಮ್ಮಲ್ಲಿ ಆತ್ಮವಿಶ್ವಾಸ ಮತ್ತು ಶೌರ್ಯವನ್ನು ಬೆಳಿಸಿಕೊಳ್ಳುವುದಲ್ಲದೆ ತತ್ವ ಮತ್ತು ಜೀವನಶೈಲಿಯನ್ನು ಅನುಸರಿಸುವ ಮೂಲಕ ಜೀವನದಲ್ಲಿ ಸಾರ್ಥಕತೆ ಸಾಧಿಸಬಹುದಾಗಿದೆ ಎಂದು ತಿಳಿಸಿದರು.

ಪ.ಪಂ ಮಾಜಿ ಸದಸ್ಯ ಹಾಗೂ ದೇವಾಲಯದ ಧರ್ಮದರ್ಶಿ ಕೆ.ಎಲ್.ಆನಂದ್ ಮಾತನಾಡಿ ಪ್ರಚಲಿತ ಯುಗದಲ್ಲಿ ಹನುಮ ಜಯಂತಿ ಆಚರಣೆ ಸಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಹೊಸ ಅರ್ಥಗಳನ್ನು ಪಡೆದುಕೊಂಡಿದೆ. ಜನರು ಹನುಮಂತನ ಆದರ್ಶಗಳನ್ನು ತಮ್ಮ ಜೀವನದಲ್ಲಿ ಆಳವಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಹಾಗೂ ಹನುಮ ಜಯಂತಿ ಯಂದು ಭಕ್ತರು ಹನುಮಂತನನ್ನು ಪ್ರಾರ್ಥಿಸಿ ಉಪವಾಸ ಮಾಡಿ ದೇವಾಲಯಗಳಿಗೆ ಬೇಟಿ ನೀಡಿ ಶ್ರದ್ದಾ ಭಕ್ತಿಯಿಂದ ಪ್ರಾರ್ಥಿಸುವ ಮೂಲಕ ತಮ್ಮ ಇಷ್ಟಾರ್ಥಗಳನ್ನು ನೇರವೇರಿಸಿ ಕೊಳ್ಳುತ್ತಾರೆ ಎಂದು ತಿಳಿಸಿದರು.

ಪ್ರಧಾನ ಅರ್ಚಕ ಮಾರುತಿ ನೇತೃತ್ವದಲ್ಲಿ ನಡೆದ ಹನುಮ ಜಯಂತಿ ವಿಶೇಷ ಕಾರ್ಯಕ್ರಮದಲ್ಲಿ ಕೆ.ಎಲ್.ಆನಂದ್, ನಿವೃತ್ತ ಶಿಕ್ಷಕ ಬಿ.ಹನುಮಂತರೆಡ್ಡಿ, ಸತ್ಯನಾರಾಯಣ ಶ್ರೇಷ್ಠಿ, ಗಿರೀಶ್, ಬೆಂಗಳೂರಿನ ಹನುಮಂತರಾಜು, ಸಂಜೀವಣ್ಣ, ಕೆ.ಎನ್.ಲೋಕೇಶ್, ಕೇಶವಮೂರ್ತಿ, ಕಮಲ, ಡಿ.ನರಸಿಂಹಯ್ಯ, ಗಿರಿಜಾ, ಜಯಲಕ್ಷ್ಮಿಮ್ಮ, ಆರ್.ಲಕ್ಷ್ಮಿ, ಸುಧಾ, ಭರತ್, ಹನು ಮಂತ, ಚಂದ್ರಮ್ಮ, ಆಕಾಶ್, ಗಗನ್ ಸೇರಿದಂತೆ ನೂರಾರು ಭಕ್ತರು ಹನುಮಂತಮ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಇನ್ನಿತರರು.

# ಕಸದ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಯುವ ನಾಯಕ ಕೆ.ಎನ್.ಸುನೀಲ್ ನಂಜೇಗೌಡ ಪಟ್ಟಣ ಪರ್ಯಟನೆ





**ಮಾಲೂರು :** ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಬರುವ 27ವಾರ್ಡ್ ಗಳಲ್ಲಿ ಜನಸಂಖ್ಯೆ ಹಾಗೂ ಬಡಾವಣೆಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಸದ ಸಮಸ್ಯೆ ಹೆಚ್ಚಾಗಿ ವಿಲೇವಾರಿ ಮಾಡಲು ಕಷ್ಟಕರವಾಗಿದೆ. ಕಸಮುಕ್ತ ಪಟ್ಟಣ ಮಾಡುವ ಗುರಿ ಹೊಂದಿರುವುದಾಗಿ ಯುವ ನಾಯಕ, ಸಮಾಜ ಸೇವಕ ಕೆ.ಎನ್.ಸುನೀಲ್ ನಂಜೇಗೌಡ ಹೇಳಿದರು.

ಪಟ್ಟಣದ ಪುರಸಭಾ ಕಚೇರಿ, 27 ವಾರ್ಡ್ ಗಳಲ್ಲಿ ಬೆಳಗಿನ ಜಾವದಲ್ಲಿ ಪರ್ಯಾಟನೆ ನಡೆಸುವ ಮೂಲಕ ಕಸ ವಿಲೇವಾರಿ ಮಾಡಲು ಅಧಿಕಾರಿ, ಪೌರಕಾರ್ಮಿರ ಬಳಿ ಚರ್ಚಿಸಿದರು. ಪ್ರತಿ ನಿತ್ಯ ಬೆಳಗಿನ ಜಾವ 4 ಗಂಟೆಗೆ ಪಟ್ಟಣ ಸ್ವಚ್ಚತೆ ಮಾಡಲು ಬರುವ ಪೌರಕಾರ್ಮಿರು ಮಳೆ, ಚಳಿ, ಬಿಸಿಲು, ಗಾಳಿ ಎನ್ನದೇ ಕರ್ತವ್ಯ ನಿರ್ವಹಿಸುವ ಕಾರ್ಮಿಕರ ಸಮಸ್ಯೆಗಳು, ಅವರ ಸಾದಕ ಬಾದಕಗಳ ಬಗ್ಗೆ ಅಲಿಸಿ ಅವರ ಬಳಿ ಮನವಿ ಸ್ವೀಕರಿಸಿದರು.

ಮಾಲೂರು ಪಟ್ಟಣ ಹಾಗೂ ಪುರಸಭಾ ವ್ಯಾಪ್ತಿಯಲ್ಲಿ 27 ವಾರ್ಡ್ ಗಳ ಸ್ವಚ್ಚತೆ ಮಾಡುವ ಮೂಲಕ ಕಸಮುಕ್ತ ಪುರಸಭೆ ಮಾಡುವ ಗುರಿ ಹೊಂದಿದ್ದು, ಈಗಾಗಲೇ ಶಾಸಕ ಕೆ.ವೈ.ನಂಜೇಗೌಡರು ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ. ಪಟ್ಟಣವು ದಿನೆ ದಿನೇ ಮನೆಗಳು, ಬಡಾವಣೆಗಳ ನಿರ್ಮಾಣವಾಗುತ್ತಿರುವ ಹಿನ್ನೆಯಲ್ಲಿ ಜನಸಂಖ್ಯೆ ಸಹ ಹೆಚ್ಚಾಗುತ್ತಿರುವ ಜತೆಗೆ ಕಸದ ಸಮಸ್ಯೆ ಹೆಚ್ಚಾಗಿದೆ. ಕಸ ವಿಲೇವಾರಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಜನತೆಯ ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ಅಲಿಸಿ ಬೆಳಗಿನ ಜಾವ 4 ಗಂಟೆಗೆ ಪಟ್ಟಣದ ವಾರ್ಡ್ ಗಳಲ್ಲಿ ಪರ್ಯಟನೆ ಮಾಡಿ ಪೌರಕಾರ್ಮಿರ ಸಮಸ್ಯೆಗಳನ್ನು ಪರಿಶೀಲನೆ ನಡೆಸಿ ಬಗ್ಗೆ ಹರಿಸಲು ಹಾಗೂ ಕಸದ ಸಮಸ್ಯೆ ಶಾಶ್ವತ ಪರಿಹಾರಕ್ಕೆ ಮೊದಲ ಹೆಜ್ಜೆ ಇಟ್ಟಿದ್ದು, ಪುರಸಭಾ ಸದಸ್ಯರು, ಪಟ್ಟಣದ ನಾಗರೀಕರು, ಜನಪ್ರತಿನಿಧಿಗಳು, ಕಾರ್ಯಕರ್ತರು ಸಹಕಾರ ನೀಡಬೇಕು ಎಂದರು.ನೂಲುನಂತೆ ಬಟ್ಟೆ, ಅಪ್ಪನಂತೆ ಮಗ ಎನ್ನುವ ಗಾದೆ ಮಾತಿನಂತೆ ಶಾಸಕ ಕೆ.ವೈ.ನಂಜೇಗೌಡ ಅವರ ಮಗ ಸುನೀಲ್ ನಂಜೇಗೌಡರು ಸಹ ಅವರ ಹಾದಿಯಲ್ಲೆ ಸಮಾಜ ಸೇವೆ ಸೇರಿದಂತೆ ಬಡಜನರ ಕಷ್ಟಕಾರಣ್ಯಕ್ಕೆ ಮೊದಲು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಶಾಸಕರು ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಭಾಗಿಯಾದ ಕಾರಣ ಜನರ ಕಷ್ಟಕ್ಕೆ ನೀಲ್ಲುವ ಜತೆಗೆ ಪಟ್ಟಣದಲ್ಲಿ ಕಸದ ಸಮಸ್ಯೆಯ ಬಗ್ಗೆ ಅರಿತು ಶಾಶ್ವತ ಪರಿಹಾರಕ್ಕೆ ಚಿಂತನೆ ನಡೆಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಪ್ರತಿಯೊಬ್ಬರಿಗೂ ಸರಕು ಮತ್ತು ಸೇವಾ ತೆರಿಗೆ ಕಾನೂನು ಬಗ್ಗೆ ಅರಿವು ಇರಬೇಕು




**ಚಾಮರಾಜನಗರ:** ಪ್ರತಿಯೊಬ್ಬರಿಗೂ ಸರಕು ಮತ್ತು ಸೇವಾ ತೆರಿಗೆ ಕಾನೂನು ಬಗ್ಗೆ ಅರಿವು ಇರಬೇಕು. ಹಾಗಾದಾಗ ಮಾತ್ರ ಯಾವುದೇ ತೊಂದರೆ ಇರುವುದಿಲ್ಲ, ಇಲ್ಲದಿದ್ದರೆ ತೆರಿಗೆ ಜೊತೆಗೆ ಬಡ್ಡಿ ಮತ್ತು ದಂಡವನ್ನು ತೆರಬೇಕಾಗುತ್ತದೆ ಎಂದು ವಾಣಿಜ್ಯ ತೆರಿಗೆ ಅಧಿಕಾರಿ ಮಂಜುಕುಮಾರ್ ತಿಳಿಸಿದರು.

ನಗರದ ಸಂತೆಮರಳ್ಳಿ ರಸ್ತೆಯಲ್ಲಿ ಇರುವ ಖಾಸಗಿ ಹೋಟಲ್ ನಲ್ಲಿ ಗುರುವಾರ ನಡೆದ ಚಾಮರಾಜನಗರ ಜಿಲ್ಲಾ ಲೆಕ್ಕ ಪರಿಶೋಧಕರ ಸಂಘದಿಂದ ಹಮ್ಮಿಕೊಂಡಿದ್ದ ಸರಕು ಮತ್ತು ಸೇವಾ ತೆರಿಗೆ ಕಾನೂನು ಅರಿವು ಕಾರ್ಯಗಾರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಸರಕು ಮತ್ತು ಸೇವಾ ತೆರಿಗೆ ಕಾನೂನು ಅಡಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ನೀಡುವ ನೋಟಿಸ್‌ಗೆ ತಪ್ಪದೇ ಉತ್ತರಿಸಬೇಕು. ಜಿ.ಎಸ್.ಟಿ ಕೌನ್ಸಿಲ್ ಹೊರ ತಂದಿರುವ ಕಾನೂನಿನ ಪ್ರಕಾರ 2017-18 ಸಾಲಿನಿಂದ 2019-20 ಸಾಲಿಗೆ ಗ್ರಾಹಕರು ತೆರಬೇಕಾಗಿರುವ ಬಡ್ಡಿ ಮತ್ತು ದಂಡವನ್ನು ಜಿ.ಎಸ್.ಟಿ ಕಾಯ್ದೆ 73 ರ ಪ್ರಕಾರ ವಿನಾಯಿತಿ ಪಡೆಯಬಹುದಾಗಿದೆ. ಅದ್ದರಿಂದ ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ತಿಳಿಸಿದರು.

ಗಿಡಕ್ಕೆ ನೀರಾಕುವುದರ ಮೂಲಕ ಉದ್ಘಾಟಿಸಿದ ವಾಣಿಜ್ಯ ಇಲಾಖೆಯ ಅಧಿಕಾರಿಗ ಉಮಾಮಹೇಶ್ವರಿ ಅವರು ಮಾತನಾಡಿ ಅವರು ನಿರಂತರ ಕಲಿಕೆಯಿಂದ ಸೇವಾಮಾರ್ಗವು ಸುಗಮವಾಗಿರುತ್ತದೆ. ಪ್ರತಿವರ್ಷವು ಇಂತಹ ಕಾರ್ಯಗಾರಗಳನ್ನು ನಡೆಸಬೇಕು ಎಂದರು.

ಜಿಲ್ಲಾ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷ ಸಿ.ಎಂ. ವೆಂಕಟೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಜಿ.ಎಸ್.ಟಿ ಕಾಯ್ದೆ ಕಾನೂನು ಬಂದು 7 ವರ್ಷ ಕಳೆದರು ಸಹ ಕಾನೂನಿನಲ್ಲಿ ಅನೇಕ ಬದಲಾವಣೆಗಳು ಈಗಲೂ ಆಗುತ್ತಿದೆ. ಪ್ರತಿವರ್ಷವೂ ಕಾನೂನು ಕಾಯ್ದೆ ಅರಿವು ಕಾರ್ಯಕ್ರಮ ಆಯೋಜಿಸುವುದರಿಂದ ಲೆಕ್ಕ ಪರಿಶೋಧಕರು ಕಾಲಕಾಲಕ್ಕೆ ಕಾನೂನಿನಲ್ಲಿ ಆಗುವ ಬದಲಾವಣೆಯನ್ನು ತಿಳಿದುಕೊಂಡು ಸೇವೆ ಸಲ್ಲಿಸುವುದಕ್ಕೆ ತರಬೇತಿ ಅಗತ್ಯವಾಗಿದೆ. ಕಾನೂನು ತಜ್ಞರಿಂದ ಅಗಾಗ ಲೆಕ್ಕ ಪರಿಶೋಧಕರಿಗೆ ತರಬೇತಿಯನ್ನು ಸಂಸ್ಥೆಯವತಿಯಿಂದ ನೀಡುತ್ತಿರುವುದು ಇದರಿಂದ ಲೆಕ್ಕ ಪರಿಶೋಧಕರು ಉತ್ತಮ ಸೇವೆ ಸಲ್ಲಿಸಲು ಸಹಕಾರಿಯಾಗಲಿದೆ. ಈ ಸಂದರ್ಭದಲ್ಲಿ ದೇಶದಲ್ಲಿ ದಾಖಲೆ ಮೊತ್ತದ ಸರಕು ಮತ್ತು ಸೇವಾ ತೆರಿಗೆ ವಸುಲಿಯಾಗಿರುವುದು ಬಹಳ ಸಂತೋಷದ ವಿಷಯ, ಇದರಿಂದ ದೇಶವು ಅಭಿವೃದ್ಧಿ ಪಥದತ್ತ ಮುಂದೆ ಸಾಗುತ್ತಿದೆ ಎಂದು ತಿಳಿಯ ಬಹುದು.

ವೇದಿಕೆಯಲ್ಲಿ ವಾಣಿಜ್ಯ ಇಲಾಖೆಯ ಅಧಿಕಾರಿಗಳಾದ ನಾಗರಾಜು, , ಷಮ್ಮುಖ.ಸಿ.ಜಿ, ಸಂಸ್ಥೆ ಕಾರ್ಯದರ್ಶಿ ಮಂಜು, ಹಿರಿಯ ಲೆಕ್ಕ ಪರಿಶೋಧಕರಾದ ಪುಟ್ಟಮಾದಪ್ಪ, ಶಿವಕುಮಾರ್, ಶಂಕರ್‌ಪಾಟೀಲ್, ಇದ್ದರು.

ಈ ಸಂದರ್ಭದಲ್ಲಿ ಸಂಘದ ಸದಸ್ಯರಾದ ಎಂ.ಕಮಲ್‌ರಾಜ್, ನವೀನ್, ಮಣಿಕಂಠಸ್ವಾಮಿ, ಟಿ.ಬಾಲು, ಚಂದ್ರು, ಶಂಭುಲಿಂಗಯ್ಯ, ನಾಗಣ್ಣ, ನಾರಾಯಣಸ್ವಾಮಿ, ರಂಗನಾಥ್, ಶ್ರೀಧರ್, ಪ್ರಭುಸ್ವಾಮಿ, ಮಹೇಂದ್ರಪ್ರಸಾದ್, ಇನ್ನು ಮುಂತಾದವರು ಹಾಜರಿದ್ದರು.

## ಸುದ್ದಿ ಸಂಜೆ

### ಶಾಲೆಗಳಿಗೆ ಪೂರ್ಣ ತರಗತಿ

ಚಾಮರಾಜನಗರ: ಮಳೆಯ ಕಾರಣದಿಂದ ಜಿಲ್ಲಾದ್ಯಂತ ಡಿಸೆಂಬರ್ 2 ಹಾಗೂ 3 ರಂದು ಜಿಲ್ಲಾಧಿಕಾರಿಗಳ ಅನುಮತಿ ಮೇರೆಗೆ ಶಾಲೆಗಳಿಗೆ ರಜೆ ಘೋಷಣೆ ಮಾಡಲಾಗಿದ್ದ ಹಿನ್ನೆಲೆಯಲ್ಲಿ ಇದೇ ತಿಂಗಳ ಡಿಸೆಂಬರ್ 14 ಮತ್ತು 21ರ ಶನಿವಾರಗಳಂದು ಪೂರ್ಣ ತರಗತಿ ನಡೆಸಿ ರಜೆ ಅವಧಿಯನ್ನು ಸರಿದೂಗಿಸಲು ಆದೇಶಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ (ಆಡಳಿತ) ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನಾಳೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಡಿಸೆಂಬರ್ 15 ರಂದು ತುರ್ತು ನಿರ್ವಹಣೆ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಚಾಮರಾಜನಗರ ಪಟ್ಟಣದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸೋಮವಾರಪೇಟೆ, ರೈಲ್ವೇ ಬಡಾವಣೆ, ಮೈಸೂರು ರಸ್ತೆ, ಪೊಲೀಸ್ ವಸತಿ ಗೃಹ, ಕೆ.ಹೆಚ್.ಬಿ ಕಾಲೋನಿ, ಗುಂಡ್ಲುಪೇಟೆ ರಸ್ತೆ, ಭುಜಂಗೇಶ್ವರ ಬಡಾವಣೆ, ಸಂತೇಮರಳ್ಳಿ ವೃತ್ತ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಸೆಸ್ಕ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

### ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರದರ್ಶನ ಮಳಿಗೆ ತೆರೆಯಲು ಅವಕಾಶ

ಚಾಮರಾಜನಗರ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಎಕ್ಸ್‌ಪ್ಲೋರಿಂಗ್ ನೇಚರ್ಸ್ ಫಾರ್ಮಸಿ: ಪೊಟೆನ್ಸಿಯಲ್ ಆಫ್ ಮೆಡಿಷನಲ್ ಆಂಡ್ ಆರೋಮೆಟಿಕ್ ಪ್ಲಾಂಟ್ಸ್ ಆಂಡ್ ದೇರ್ ಕನ್ಸರ್‌ವೇಷನ್ ವಿಷಯದ ಕುರಿತು ಜನವರಿ 7 ರಿಂದ 9 ರವರೆಗೆ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದ್ದು, ಈ ಸಮ್ಮೇಳನದಲ್ಲಿ ಪ್ರದರ್ಶನದ ಮಳಿಗೆ ತೆರೆಯಲು ಅವಕಾಶವಿದೆ.

ಸಮ್ಮೇಳನದಲ್ಲಿ ಔಷಧೀಯ ಮತ್ತು ಸುಗಂಧ ಸಸ್ಯಗಳ ಕುರಿತ ಪ್ರದರ್ಶನ ಮಳಿಗೆಯನ್ನು (10ಥ10 ಅಡಿ ವಿಸ್ತೀರ್ಣ) ಹಾಕಲು ಅವಕಾಶ ಕಲ್ಪಿಸಲಾಗಿದೆ. ಸಮ್ಮೇಳನದಲ್ಲಿ ರಾಜ್ಯ ಹಾಗೂ ಹೊರ ರಾಜ್ಯದ ಪ್ರತಿನಿಧಿಗಳು ಭಾಗವಹಿಸುವುದರಿಂದ ಔಷಧೀಯ ಮತ್ತು ಸುಗಂಧ ಸಸ್ಯ ಆಧಾರಿತ ಉತ್ಪನ್ನಗಳಿಗೆ ಹೆಚ್ಚಿನ ಪ್ರಚಾರ ದೊರೆಯಲಿದೆ.

ಪ್ರದರ್ಶನದ ಮಳಿಗೆಯನ್ನು ಹಾಕಲು ಇಚ್ಚಿಸುವ ಆಸಕ್ತ ಕಂಪನಿಗಳು ಮತ್ತು ಉದ್ಯಮದಾರರು ಡಿಸೆಂಬರ್ 31ರೊಳಗೆ ಅಕಾಡೆಮಿಯ ಅಧಿಕಾರಿಗಳ ಮೊ.ಸಂ 9880405181, 9743084194 ಹಾಗೂ 9845258894 ಅನ್ನು ಸಂಪರ್ಕಿಸಬಹುದು. ಅಥವಾ ಅಕಾಡೆಮಿಯ ವೆಬ್ ¸ÉÊmï ್ಞಣಣಠಿ:// ಇಣಚಿಛಿಚಿಜಜಟಥಿ.ಟ ಅನ್ನು ವೀಕ್ಷಿಸಬಹುದು ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎ.ಎಂ ರಮೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಚಂಚಲಗುಡ ಜೈಲಿನಿಂದ ಅಲ್ಲುಅರ್ಜುನ್ ಬಿಡುಗಡೆ

**ಹೈದರಾಬಾದ್:** ಚಂಚಲಗುಡ ಜೈಲಿನಲ್ಲಿ ವಿಚಾರಣಾಧೀನ ಕೈದಿಯಾಗಿದ್ದ ಅಲ್ಲು ಅರ್ಜುನ್ ಅವರನ್ನು ಹೈಕೋರ್ಟ್ ನೀಡಿದ್ದ ಮಧ್ಯಂತರ ಜಾಮೀನಿನ ಅನ್ವಯ ಬಿಡುಗಡೆ ಮಾಡಲಾಗಿದೆ. ಅಲ್ಲು ಅರ್ಜುನ್ ಅವರನ್ನು ಅಧಿಕಾರಿಗಳು ಚಂಚಲಗುಡ ಜೈಲಿನ ಹಿಂಬದಿಯ ಗೇಟ್‌ನಿಂದ ಹೊರಗೆ ಕಳುಹಿಸಿದ್ದಾರೆ. ಅಲ್ಲು ಅರ್ಜುನ್ ಅವರನ್ನು ಬೆಂಗಾವಲು ವಾಹನದ ಮೂಲಕ ಅವರ ನಿವಾಸಕ್ಕೆ ತೆರಳಲು ಪೊಲೀಸರು ಅನುವು ಮಾಡಿಕೊಟ್ಟಿದ್ದಾರೆ.

ಶುಕ್ರವಾರ ಸಂಧ್ಯಾ ಥಿಯೇಟರ್ ಕಾಲ್ತುಳಿತ ಘಟನೆಯಲ್ಲಿ ಅಲ್ಲು ಅರ್ಜುನ್ ಅವರನ್ನು ಬಂಧಿಸಲಾಗಿತ್ತು . ನಾಂಪಲ್ಲಿ ಕೋರ್ಟ್ ಅಲ್ಲು ಅರ್ಜುನ್‌ಗೆ 14 ದಿನಗಳ ರಿಮಾಂಡ್ ನೀಡಿತ್ತು. ಆ ಬಳಿಕ ತೆಲಂಗಾಣ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿತ್ತು. ಮಧ್ಯಂತರ ಜಾಮೀನಿನ ಹೊರತಾಗಿಯೂ ಅಲ್ಲು ಅರ್ಜುನ್ ರಾತ್ರಿಯಿಡೀ ಜೈಲಿನಲ್ಲೇ ಇದ್ದರು. ಬಿಡುಗಡೆ ಪ್ರಕ್ರಿಯೆ ವಿಳಂಬವಾದ ಕಾರಣ,

ಇಂದು ಬೆಳಗ್ಗೆ ಅವರನ್ನು ಬಿಡುಗಡೆ ಮಾಡಲಾಗಿದೆ. ಮೃತ ಮಹಿಳೆಯ ಕುಟುಂಬದವರು ನೀಡಿದ ದೂರಿನ ಆಧಾರದ ಮೇಲೆ ನಗರ ಪೊಲೀಸರು ಅಲ್ಲು ಅರ್ಜುನ್, ಅವರ ಭದ್ರತಾ ತಂಡ ಮತ್ತು ಥಿಯೇಟರ್ ಆಡಳಿತದ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಬಿಎನ್‌ಎಸ್‌ನ ವಿವಿಧ ವಿಭಾಗಗಳ ಅಡಿ ಚಿಕ್ಕಡಪಲ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

# ಗ್ರಾಮೀಣ ಜನತೆಯ ಆರೋಗ್ಯ ಸೇವೆ ಮಾಡುವ ಸದುದ್ದೇಶದ ಗುರಿ

## ಆದಿಚುಂಚನಗಿರಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಮೂತ್ರಪಿಂಡ ಆರೈಕೆ ವಿಭಾಗ ಆರಂಭ

**ನಾಗಮಂಗಲ:** ಗ್ರಾಮೀಣ ಜನತೆಯ ಆರೋಗ್ಯದ ಸೇವೆ ನಿಮಿತ ಆಸ್ಪತ್ರೆಯ ಸೇವಾ ಸೌಲಭ್ಯಗಳ ನೀಡುವ ಉದ್ದೇಶದ ಗುರಿ ಆಗಿದೆ ಎಂದು ಡಾಕ್ಟರ್ ನರೇಂದ್ರ ತಿಳಿಸಿದರು.

ಅವರು ನಾಗಮಂಗಲ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಮಾಧ್ಯಮಗೋಷ್ಠಿ ಏರ್ಪಡಿಸಿದ್ದ ಬಿಜಿಎಸ್ ಆರೋಗ್ಯಧಿಕಾರಿಗಳು ಭಾಗವಹಿಸಿ ಮಾತನಾಡಿದರು. ಶ್ರೀ ಬಾಲಗಂಗಾಧನಾಥ ಮಹಾಸ್ವಾಮೀಜಿ ಮೂತ್ರಪಿಂಡ ಆರೈಕೆ ವಿಭಾಗ ಬಾಲಗಂಗಾಧರನಾಥ ನಗರ ನಾಗಮಂಗಲ ಮತ್ತು ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಜಿಗಳ ಆಶೀರ್ವಾದದೊಂದಿಗೆ ಆಸ್ಪತ್ರೆಯ ಮುಖ್ಯಸ್ಥರು ಆದ ಡಾಕ್ಟರ್ ಶಿವಕುಮಾರ್ ರವರ ಮಾರ್ಗದರ್ಶನದಲ್ಲಿ ಇದೇ ಕಾಲೇಜಿನ ಹಳೆಯ ವಿದ್ಯಾರ್ಥಿಗಳಲ್ಲಿ ಡಾ. ನರೇಂದ್ರ ಎಸ್ ರವರು ಮೂತ್ರ ಶಾಸ್ತ್ರಜ್ಞರು ಹಾಗೂ ಇತರೆ ವೈದ್ಯಾಧಿಕಾರಿಗಳ ಸಹಯೋಗದೊಂದಿಗೆ ಬಿಕೆಸಿಯನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.




ಗ್ರಾಮೀಣ ಜನತೆಗೆ ಆರೋಗ್ಯ ಸೇವೆ ಸಲ್ಲಿಸುವ ಉದ್ದೇಶದಿಂದ ಮೂತ್ರಪಿಂಡ ಕಸಿ ಜೊತೆಗೆ ಮೂತ್ರ ಶಾಸ್ತ್ರ ಮೂತ್ರಪಿಂಡಗಳ ಸಮಸ್ಯೆಗಳಲ್ಲಿ ಸಮಗ್ರ ಆರೈಕೆಯನ್ನು ನೀಡುವ ನೂತನ ತಂತ್ರಜ್ಞಾನ ಘಟಕದೊಂದಿಗೆ ಆದಿಚುಂಚನಗಿರಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವು ಮಹಾ ಸಂಸ್ಥಾನ ಮಠ ಚುಂಚನಗಿರಿಗೆ ಹೊಂದಿಕೊಂಡಿರುವ ಜಿಲ್ಲೆಗಳಾದ ಮಂಡ್ಯ ರಾಮನಗರ ಹಾಸನ ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಒಳಗೊಂಡಂತೆ ಅನುಕೂಲವಾಗುವ ಹಿತ ದೃಷ್ಟಿಯಿಂದ ಈ ಯೋಜನೆಯನ್ನು ರೂಪಿಸಲಾಗಿದೆ. ಎಂದು ಡಾಕ್ಟರ್ ನಂದೀಶ್ ರವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಜನತೆಗೆ ಆರೋಗ್ಯ ಸೇವೆ ನಿಮಿತ ಡಯಾಲಿಸಿಸ್ ಮೂತ್ರಪಿಂಡ ಐಎನ್ ಸರ್ಜರಿ ಮೂತ್ರಪಿಂಡದ ಕಲ್ಲುಗಳಿಗೆ ಸಮಗ್ರ ಶಿಸ್ತ ಚಿಕಿತ್ಸೆ ಹಾರ್ಶೈಕೆ ಲೇಸರ್ ಚಿಕಿತ್ಸೆ ಕಿಡ್ನಿ ಸಮಸ್ಯೆ ಮೂತ್ರ ಹೀಗೆ ವಿವಿಧ ರೀತಿಯ ಪರಿಹಾರ ಎಲ್ಲಾ ಸೇವೆಯು ಆದಿಚುಂಚನಗಿರಿ ಆಸ್ಪತ್ರೆ ಮತ್ತು ಎಲ್ಲಾ ಖಾಸಗಿ ಸರ್ಕಾರಿ ವಿಮೆಯೊಂದಿಗೆ ನಗದು ರಹಿತ ವೈದ್ಯಕೀಯ ಶಸ್ತ್ರಚಿಕಿತ್ಸೆಗಳನ್ನು ಆರೋಗ್ಯ ಸೇವೆಗಳನ್ನು ಮಾಡಲು ವ್ಯವಸ್ಥೆ ಮಾಡಲಾಗಿದೆ ಇಂತಹ ವ್ಯವಸ್ಥೆಗಳನ್ನು ಗ್ರಾಮೀಣ ಜನತೆಉಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ಇದೇ ಸಂದರ್ಭದಲ್ಲಿ ವೈದ್ಯಾಧಿಕಾರಿಗಳಾದ ಚೇತನ್ ಮತ್ತು ಜಿಡಿ ನಾರಾಯಣಗೌಡ ಉಪಸ್ಥಿತರಿದ್ದರು.

## ಸುದ್ದಿ ಸಂಜೆ

### ಜೆಡಿಎಸ್ ಜಯಭೇರಿ; ಕಾಂಗ್ರೆಸ್‌ಗೆ ಮುಖಭಂಗ



**ಶಿಡ್ಲಘಟ್ಟ :** ತಾಲ್ಲೂಕಿನಲ್ಲಿ ತೀವ್ರ ಕುತೂಹಲ ಕೆರಳಿಸಿದ್ದ ಅವಧಿ ಮುಗಿದಿದ್ದ 4 ಗ್ರಾಪಂಗಳ ಚುನಾವಣೆಯ ಮತ ಎಣಿಕೆ ಕಾರ್ಯ ಗುರುವಾರ ನಗರದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನಡೆದು ಫಲಿತಾಂಶ ಹೊರ ಬಿದಿದ್ದು, 4 ಗ್ರಾಪಂನಲ್ಲಿ ಜೆಡಿಎಸ್ ಬೆಂಬಲಿಗರು ಜಯಭೇರಿ ಭಾರಿಸುವ ಮೂಲಕ ರಾಜ್ಯದ ಆಡಳಿತರೂಢ ಕಾಂಗ್ರೆಸ್‌ಗೆ ತೀವ್ರ ಮುಖಭಂಗ ಉಂಟು ಮಾಡಿದ್ದಾರೆ. ತಾಲ್ಲೂಕಿನ ಮಳಮಾಚನಹಳ್ಳಿ,ಹೊಸಪೇಟೆ, ನಾಗಮಂಗಲ ಹಾಗು ಭಕ್ತರಹಳ್ಳಿ ಸೇರಿ 4 ಗ್ರಾಮ ಪಂಚಾಯಿತಿಗಳ ಒಟ್ಟು 48 ಸದಸ್ಯ ಸ್ಥಾನಗಳ ಪೈಕಿ 3 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು. ಉಳಿದ 45 ಸದಸ್ಯ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ 4 ಗ್ರಾಮ ಪಂಚಾಯತಿಗಳಲ್ಲಿ ಅಧಿಕಾರ ಹಿಡಿಯುವಷ್ಟು ಸದಸ್ಯರನ್ನು ಗೆದ್ದು ಬೀಗಿದ್ದು, ಕಾಂಗ್ರೆಸ್ ಗುಂಪುಗಾರಿಕೆಗೆ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸೋತ ಬೆಲೆ ತೆತ್ತಿದೆ. ಚುನಾವಣೆ ನಡೆದ 4 ಗ್ರಾಮ ಪಂಚಾಯತಿಗಳ ಒಟ್ಟು 45 ಸದಸ್ಯ ಸ್ಥಾನಗಳ ಪೈಕಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು 32 ಸ್ಥಾನಗಳಲ್ಲಿ ಜಯಗಳಸಿದ್ದರೆ, ಕಾಂಗ್ರೆಸ್ ಬೆಂಬಲಿತ 13 ಸದಸ್ಯ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಗರು ಹೆಚ್ಚು ಸ್ಥಾನ ಪಡೆಯುವ ಮೂಲಕ ಕ್ಷೇತ್ರದ ಶಾಸಕರಾದ ಬಿ.ಎನ್.ರವಿಕುಮಾರ್ ಬೆಂಬಲಕ್ಕೆ ನಿಂತು ಅಭಿವೃದ್ಧಿಗೆ ಸಹಕರಿಸಿದ್ದಾರೆ.ಇನ್ನೂ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ವಿವಿಧ ಪಕ್ಷಗಳ ಬೆಂಬಲಿತ ಅಭ್ಯರ್ಥಿಗಳು ಸಂಭ್ರಮದಿಂದ ಜಯಶೀಲರಾದವರು ಹೊರ ನಡೆದರೆ ಪರಾಭವಗೊಂಡವರು ಸಪ್ಪೆ ಮುಖದೊಂದಿಗೆ ಹೊರ ನಡೆದರು.ನಾಲ್ಕು ಗ್ರಾಮ ಪಂಚಾಯಿತಿಗಳ 19 ಮತದಾನ ಕೇಂದ್ರದಲ್ಲಿ ಮತದಾನದ ನಡೆದಿತ್ತು ತಾಲ್ಲೂಕು ಆಡಳಿತ ಸಿಬ್ಬಂದಿ ಹಾಗೂ ಸರ್ಕಲ್ ಇನ್ಸ್ ಪೆಕ್ಟರ್ ಎಂ. ಶ್ರೀನಿವಾಸ್,ಪಿಎಸ್ಐ ವೇಣುಗೋಪಾಲ್ ಸೂಕ್ತ ಬಂದೋಬಸ್ತ್ ಒದಗಿಸಿದ್ದರಿಂದ ಯಾವುದೇ ಗೊಂದಲವಿಲ್ಲದೆ ಎಣಿಕೆ ಕಾರ್ಯವು ನಡೆಯಿತು. ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸೋಮಶೇಖರ್ ಮತ್ತು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಚಿದಾನಂದಮೂರ್ತಿ ತಲಾ 513 ಮತಗಳನ್ನು ಪಡೆದಿದ್ದರು. ಬಳಿಕ ಚುನಾವಣಾ ಅಧಿಕಾರಿಗಳು ಲಾಟರಿ ಮೂಲಕ ಫಲಿತಾಂಶ ನಿರ್ಧರಿಸಿದಾಗ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸೋಮಶೇಖರ್ ಗೆ ಲಾಟರಿ ಮೂಲಕ ಅದೃಷ್ಟದ ಗೆಲುವು ಸಾಧಿಸಿ ಗಮನ ಸೆಳೆದರು. ಹೊಸಪೇಟೆ ಗ್ರಾಮ ಪಂಚಾಯತಿ ಮಲ್ಲೇನಹಳ್ಳಿ ಅಭ್ಯರ್ಥಿ ಬಿ.ಕೃಷ್ಣಪ್ಪ 179 ಮತ ಪಡೆದರೆ, ಪ್ರತಿಸ್ಪರ್ಧಿ ಕೃಷ್ಣಪ್ಪ ರವರು 178 ಮತಗಳನ್ನು ಪಡೆದು ಒಂದುಮತದ ಅಂತರದಿಂದ ಪರಭವಗೊಂಡರು ಕೃಷ್ಣಪ್ಪ ಒಂದು ಮತದಿಂದ ಗೆಲುವು ಸಾಧಿಸಿದ್ದಾರೆ

## ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 14 ರಿಂದ 17 ವರ್ಷ ವಯೋಮಿತಿಯ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ, ಬಾಲಕಿಯರ ಮೈಸೂರು ವಿಭಾಗ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಉದ್ಘಾಟನಾ ಸಮಾರಂಭವನ್ನು ಡಿಸೆಂಬರ್ 16 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಧ್ವಜಾರೋಹಣ ನೆರವೇರಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ತಂಡಗಳ ಪರಿಚಯ ಮಾಡಿಕೊಡುವರು. ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಅವರು ಕ್ರೀಡಾಧಿಕಾರಿಗಳ ಪರಿಚಯ ಮಾಡಿಕೊಡುವರು. ಶಾಸಕರಾದ ಎಂ.ಆರ್. ಮಂಜುನಾಥ್ ಅವರು ಕ್ರೀಡಾ ವಂದನೆ ಸ್ವೀಕರಿಸುವರು. ಶಾಸಕರಾದ ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ. ಪುಷ್ಪ ಅಮರನಾಥ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಚಾಮರಾಜನಗರ ಮತ್ತು ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ (ಮುನ್ನ), ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ ಚಂದ್ರು, ನಗರಸಭೆ ಅಧ್ಯಕ್ಷರಾದ ಎಸ್. ಸುರೇಶ್, ಉಪಾಧ್ಯಕ್ಷರಾದ ಮಮತ, ಸದಸ್ಯರಾದ ಕುಮುದ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ. ಸ್ವಾಮಿ, ಜೆಎಸ್‌ಎಸ್ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ಮಹದೇವಸ್ವಾಮಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ಹನುಮಜಯಂತಿ: ವಿವಿಧೆಡೆ ಸಂಭ್ರಮದ ರಥೋತ್ಸವ





**ಶಿರಾ:** ತಾಲ್ಲೂಕಿನ ದೊಡ್ಡ ಅಲದವುರದ ಆಂಜನೇಯ ದೇಗುಲದಲ್ಲಿ ಹನುಮ ಜಯಂತಿ ನಿಮಿತ್ತ ಆಂಜನೇಯ ಸ್ವಾಮಿ ರಥೋತ್ಸವವು ಶುಕ್ರವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಹನುಮಜಯಂತಿ ಅಂಗವಾಗಿ ಆಂಜನೇಯ ಸ್ವಾಮಿಗೆ ತಾಲ್ಲೂಕಿನ ವಿವಿದ ಕಡೆ ವಿಶೇಷ ಹೋಮ ಹವನ ಸೇರಿದಂತೆ ಅಲಂಕಾರ ಮಾಡಲಾಗಿತ್ತು. ತಾಲ್ಲೂಕಿನ ಕಳ್ಳಂಬೆಳ್ಳ ಹೋಬಳಿ ವ್ಯಾಪ್ತಿಯ ದೊಡ್ಡ ಅಲದಮರದಲ್ಲಿ ಶ್ರೀ ಹನುಮ ಜಯಂತಿ ನಿಮಿತ್ತ ಆಂಜನೇಯ ಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಶುಕ್ರವಾರಬೆಳಗ್ಗೆ ನಿಂದ ದೇವಸ್ಥಾನದಲ್ಲಿ ಶ್ರೀ ಆಂಜನೇಯ ಸ್ವಾಮಿಗೆ ರುದ್ರಾಭಿಷೇಕದೊಂದಿಗೆ ವಿಶೇಷ ಪೂಜೆ ಮಾಡಲಾಗಿತ್ತಲ್ಲದೇ ಹಲವಾರು ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಸುಂದರವಾಗಿ ಅಲಂಕರಿಸಿದ್ದ ರಥದಲ್ಲಿ ಉತ್ಸವ ಮೂರ್ತಿ ಇಡಲಾಗಿತ್ತು. ರಥೋತ್ಸವಕ್ಕೆ ಸಕಲವಾದ್ಯ ಮೇಳಗಳು ಸಾಥ್ ನೀಡಿದವು. ದಾರಿಯುದ್ದಕ್ಕೂ ರಾಮ ಭಕ್ತ ಹನುಮಾನ ಕೀ ಜೈ... ಬೋಲೋ ಶ್ರೀ ರಾಮಾಂಜನೇಯ ಮಹಾರಾಜ ಕೀ ಜೈ.. ಎಂಬ ಜಯಘೋಷಗಳು ಮೊಳಗಿದರೆ, ಭಕ್ತರೆಲ್ಲ ರಥದ ಕಳಸಕ್ಕೆ ಉತ್ತತ್ತಿ, ಬಾಳೆ, ಲಿಂಬೆ ಹಣ್ಣುಗಳನ್ನು ಎಸೆದು ಭಕ್ತಿ ಸಮರ್ಪಿಸಿದರು. ಈ ಜಾತ್ರಾ ಮಹೋತ್ಸವಕ್ಕೆ ಆಲಂಕೃತ ರಥದಲ್ಲಿ ಆಂಜನೇಯು ಸ್ವಾಮಿ ಪ್ರತಿಷ್ಠಾಪಿಸಿ ಭಕ್ತರು ಎಳೆದರು. ಸುತ್ತಮುತ್ತಲಿನ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು.

ಜೋತೆಗೆ ತಾಲ್ಲೂಕಿನ ವಿವಿಧಆಂಜನೇಯ ಸ್ವಾಮಿ ದೇವಸ್ಥಾನಗಳಲ್ಲಿ ಶ್ರದ್ಧಾಭಕ್ತಿಮತ್ತು ಸಡಗರದಿಂದ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ನಗರದ ಹೊರವಲಯದ ಆಂಜನೇಯ ಸ್ವಾಮಿ. ಪಂಚಮುಖಿ ಆಂಜನೇಯಸ್ವಾಮಿದೇವಾಲಯ ಸೇರಿದಂತೆ ಅನೇಕ ಕಡೆಗಳಲ್ಲಿ ಆಂಜನೇಯನ ಆರಾಧನೆ ನಡೆಯಿತು.ಜೊತೆಗೆ ಪ್ರಸಾರ ವ್ಯವಸ್ಥೆ ಮಾಡಲಾಗಿತ್ತು.

## ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಉಚಿತ ಟ್ಯೂಷನ್

**ಮಾಲೂರು:** ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯಾದ ಕರ್ನಾಟಕ ಪಬ್ಲಿ[illegible] ಸ್ಕೂಲ್ ನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃ[illegible] ಯೋಜನೆ ,ಬಿ.ಸಿ. ಟ್ರಸ್ಟ ವತಿಯಿಂದ ಟ್ಯೂಷನ್ [illegible] ಕ್ಲಾಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು,



ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ[illegible] ಜನ ಜಾಗೃತಿ ವೇದಿಕೆ ಸದಸ್ಯ ಉಮೇಶ[illegible] ದೀಪ ಬೆಳಗುವ ಮೂಲಕ ಉದ್ಘಾಟನೆ ಮಾಡಿ ಮಾತನಾಡಿದರು. ಪೂಜ್ಯರಾದ ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ರವರ ಮಾರ್ಗದರ್ಶನದಲ್ಲಿ ಎಸ್ ಎಸ್ ಎಲ್ ಸಿ ಮಕ್ಕಳಿಗೆ ಮೂರು ತಿಂಗಳ ಅವಧಿಯ ಉಚಿತವಾಗಿ ಟ್ಯೂಷನ್ ಕ್ಲಾಸ್ ಕಾರ್ಯಕ್ರಮವನ್ನು ತೀರ ಹಿಂದುಳಿದ ಮಕ್ಕಳಿಗೆ ರಾಜ್ಯದ ಪ್ರತಿ ತಾಲೂಕಿನಲ್ಲಿ ಒಂದು ಶಾಲೆಯನ್ನು ಆಯ್ಕೆ ಮಾಡಿಕೊಂಡು ಟ್ಯೂಶನ್ ಕ್ಲಾಸ್ ಕಾರ್ಯಕ್ರಮವನ್ನು ಮಾಡುತ್ತಿರುವುದು ತುಂಬಾ ಸಂತಸದ ಸುದ್ದಿಯಾಗಿದೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂದು ಇಡೀ ಜಗತ್ತಲ್ಲಿ ಬದಲಿಸಬಹುದಾದ ಅಸ್ತ್ರ ಶಿಕ್ಷಣ. ಶಾಲೆಯ ವಿದ್ಯಾರ್ಥಿಗಳು ಚೆನ್ನಾಗಿ ಓದಿ ಉತ್ತಮ ಅಂಕ ಗಳಿಸಿ ಬೇರೆ ಬೇರೆ ಹುದ್ದೆಗಳನ್ನು ಅಲಂಕರಿಸಿ ಉತ್ತಮ ಪ್ರಜೆಗಳಾಗಿ ತಂದೆ ತಾಯಿಗೆ ಹಾಗೂ ಗುರುಗಳಿಗೆ ಹೆಸರು ಬರುವ ಹಾಗೆ ಓದಬೇಕು ಎಂದು ಹೇಳಿದರು. ಮುಖ್ಯೋಪಾಧ್ಯಾಯರಾದ ವೆಂಕಟಪ್ಪ , ಶಿಕ್ಷಕರಾದ ಪ್ರಸನ್ನ , ಸುಕನ್ಯಾ , ಸವಿತಾ ಜ್ಞಾನ ವಿಕಾಸ ಸಮನ್ವಯಾಧಿಕಾರಿ ಉಷಾರಾಣಿ ಸೇವಾ ಪ್ರತಿನಿಧಿಯಾದ ಭಾರತಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಬಾಗೂರು ಸೊಣ್ಣೇನಹಳ್ಳಿಹಳ್ಳಿಯಲ್ಲಿ ವಿಜೃಂಭಣೆಯ ಹನುಮ ಜಯಂತಿ

**ಮಾಲೂರು:** ತಾಲ್ಲೂಕಿನ ಚಿಕ್ಕತಿರುಪತಿ ಸಮೀಪದ ಬಾಗೂರು ಸೊಣ್ಣೇನಹಳ್ಳಿಹಳ್ಳಿಯಲ್ಲಿ ಶುಕ್ರವಾರ ಹನುಮ ಜಯಂತಿಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಈ ಶ್ರೀ ಗಂಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ಹೋಮ ಹವನ, ಕುಂಭಾಬಿಷೇಕ, ಮಹಾ ಮಂಗಳಾರತಿ ಕಾರ್ಯಕ್ರಮ ನಡೆದವು. ದೇವರಿಗೆ ಪ್ರಧಾನ ಅರ್ಚಕಾದ ರಾಧಾಕೃಷ್ಣ ಭಾರದ್ವಾಜ್ ಅವರ ನೇತೃತ್ವದಲ್ಲಿ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ದೇವಾಲಯದ ಆವರಣದಲ್ಲಿ ಭಜನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು ಹಾಗೆಯೇ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಮಾಜಿ ಗ್ರಾ ಪಂ ಸದಸ್ಯ ಮೋಟಪ್ಪ ಮಾತನಾಡಿ, ಶ್ರೀ ಗಂಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು 7 ವರ್ಷದ ಹನಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಈ



ದೇವಸ್ಥಾನವು ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರುತ್ತದೆ. ಈ ಸ್ಥಳವನ್ನು ಮೊದಲು ಊರಿನತ್ತ ಎಂಬುದಾಗಿ ಕರೆಯುತ್ತೇವೆ. ಅಂದರೆ ಈ ಸ್ಥಳವು ಒಂದು ಊರು ಆಗಿತ್ತು ಅಂದರೆ ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರಿಗೆ ವಿವಿಧ ಖಾಯಿಲೆಗಳು ಎದುರಾಗಿ ಊರನ್ನು ಬಿಟ್ಟು ಈ ಸ್ಥಳದಲ್ಲಿ ನೆಲೆಸಿದ್ದರು ಆ ಕಾರಣಕ್ಕಾಗಿ ಊರಿನತ್ತ ಶ್ರೀ ಗಂಟೆ ಆಂಜನೇಯ ಸ್ವಾಮಿ ದೇವಸ್ಥಾನ ಎಂಬುದಾಗಿ ಕರೆಯುತ್ತೇವೆ ಎಂದರು. ಎಟ್ಟಕೋಡಿ ಸಂಪಂಗಿ ಮಾತನಾಡಿ, ಈ ದೇವಾಲಯವು ಆನಾದಿಕಾಲದಿಂದದಿಂದಲೂ ಇದ್ದು ಆಂಜನೇಯ ಸ್ವಾಮಿ ವಿಗ್ರಹವು ಉದ್ಭವ ಮೂರ್ತಿಯಾಗಿದೆ ಸುಮಾರು 6 ಅಡಿ ಇದೆ. ಈ ಕ್ಷೇತ್ರವು ತನ್ನದೇ ಆದ ಮಹತ್ವ ಹೊಂದಿರುವತ್ತದೆ ಅಂದರೆ ಇಲ್ಲಿ ಬರುವ ಭಕ್ತರು ಏನೇ ಬೇಡಿಕೊಂಡರು ಅದು ನೇರವೇರುತ್ತದೆ ಎಂಬುದು ಇಲ್ಲಿನ ಭಕ್ತರ ಪ್ರತೀತಿ. ಈ ದೇವಾಲಯದ ಯಾವುದೇ ರೀತಿಯ ಭೀಗ ಹಾಕುವುದಿಲ್ಲ ಆದರೂ ಇಲ್ಲಿಯವರೆಗೆ ಕಳ್ಳತನ ನಡೆದಿಲ್ಲ. ಇದು ಇಲ್ಲಿನ ನಂಬಿಕೆಯಾಗಿದೆ ಎಂದು ಅವರು ಹೇಳಿದರು. ದೇವಸ್ಥಾನಕ್ಕೆ ಚಿಕ್ಕತಿರುಪತಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮ್ ಪ್ರಸಾದ್, ಸದಸ್ಯ ಸತೀಶ್ ರೆಡ್ಡಿ , ಮುಖಂಡರಾದ ಟಿ. ಸಿ ಮಂಜುನಾಥ್, ಎಟ್ಟಕೋಡಿ ಕೃಷ್ಣಾರೆಡ್ಡಿ, ಸಿದ್ದಾರೆಡ್ಡಿ, ಅರೇಹಳ್ಳಿ ಪ್ರಭಾಕರ್ ಸ್ವಾಮಿ ಸೇರಿದಂತೆ ವಿವಿಧ ಗಣ್ಯರು ಭೇಟಿ ದರ್ಶನ ಪಡೆದರು. ದೇವಸ್ಥಾನದ ಎಲ್ಲಾ ವ್ಯವಸ್ಥೆಗಳನ್ನು ಎಟ್ಟಕೋಡಿ ಶಶಿಧರ್ ಶ್ರೀನಿವಾಸ್, ಶ್ರೀಧರ್, ಅಯ್ಯಪ್ಪ, ಲೊಕೇಶ್, ಹರೀಶ್, ನಾರಾಯಣ ರೆಡ್ಡಿ, ಕೃಷ್ಣಾರೆಡ್ಡಿ, ಶಿವಾರ ಮುನಿರೆಡ್ಡಿ, ವೈಟ್ ಫೀಲ್ಡ್ ಕುಮಾರ್ ಅವರು ಮಾಡಿದ್ದರು.

ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕ ಸುದರ್ಶನ್, ಮಾಜಿ ಗ್ರಾ ಪಂ ಸದಸ್ಯ ಮೋಟಪ್ಪ, ಎಟ್ಟಕೋಡಿ ಪ್ರತಾಪ್, ನವೀನ್ ಸೇರಿದಂತೆ ಭಕ್ತರು ಉಪಸ್ಥಿತರಿದ್ದರು.

# ಸಮಸ್ಯೆ ಬಗ್ಗೆ ಕೇಳಿದ್ರೇ ಶಾಸಕರಿಗೆ ಭಾಡಿ ಹೇಳ್ತಾರೇ

## ದಲಿತರ ನೂರಾರು ಸಮಸ್ಯೆಗೆ ಮುಕ್ತಿ ಯಾವಾಗ.? ಎಸ್‌ಸಿಎಸ್‌ಟಿ ಮುಂದಿನ ಸಭೆಗೆ ಗೃಹ ಸಚಿವರಿಗೆ ಆಹ್ವಾನ

ಕೊರಟಗೆರೆ: ನಾವು ಸಮಸ್ಯೆ ಬಗ್ಗೆ ಪ್ರಶ್ನೆ ಮಾಡಿದ್ರೇ ಡಾ.ಜಿ.ಪರಮೇಶ್ವರ ಸಾಹೇಬರ ಬಳಿ ಒಂದುಟೀಂ ಹೋಗುತ್ತೇ.. ಪಪಂ ಸದಸ್ಯ ಓಬಳರಾಜು-ನಂದೀಶ್ ಸರಿಯಿಲ್ಲಅಂತಾ ನಮ್ಮ ಬಗ್ಗೆ ಇಲ್ಲಸಲ್ಲದಭಾಡಿ ಹೇಳ್ತಾರೇ. ನಾವೇನು ಈಗ ಐಎಎಸ್‌ಅಧಿಕಾರಿಆಗಬೇಕಿಲ್ಲಕಣ್ರೇ..ನಾವ್ರು ಆಯ್ಕೆಆಗಿರೋದುಜನರ ಸಮಸ್ಯೆ ಆಲಿಸೋದಿಕ್ಕೆ.ನಾವು ಇವತ್ತೇರಾಜಿನಾಮೆ ನೀಡಿದ್ರು ನಮಗೇ ದುಡಿಮೆ ಮಾಡಿ ಬದುಕುವ ಶಕ್ತಿಯಿದೆಎಂದು ಪಪಂ ಸದಸ್ಯ ಕೆ.ಆರ್.ಓಬಳರಾಜು ಆಕ್ರೋಶ ವ್ಯಕ್ತಪಡಿಸಿದರು.

ಕೊರಟಗೆರೆ ಪಟ್ಟಣದಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆದತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದಕುಂದುಕೊರತೆ ಸಭೆಯಲ್ಲಿ ಪಾಲ್ಗೊಂಡು ಪಪಂಯ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ರಾತ್ರಿಯಾದ್ರೇ ಸಾಕು ಪಪಂ ನೂತನಅಂಗಡಿ ಮಳಿಗೆಗಳ ಬಳಿ ಬೀಡಿ ಸೀಗರೇಟ್ ಸೇದ್ತಾರೇ. ಯೂರಿನ್ ಪಾಸ್‌ಪಾಡ್ತಾರೇ,ರಾತ್ರಿ 10ಗಂಟೆ ನಂತರ ಸ್ಥಳೀಯರು ನನಗೇ ಪೋನ್ ಮಾಡ್ತಾರೇ.ಅಂಗಡಿ ಮಳಿಗೆ ನಿರ್ಮಾಣ ಆಗಿ 4ವರ್ಷ ಆದ್ರು ಹರಾಜು ನಡೆಯದಿರಲುಕಾರಣವೇನು. ಇದಕ್ಕೇ ನೀವು ಇತಿಶ್ರೀ ಹಾಡದಿದ್ರೇ ಎಸ್‌ಸಿ ಸಮುದಾಯದಯುವಕರನ್ನಅಂಗಡಿಯಲ್ಲೇ ಕುಳಿಸ್ತೀವಿ.ನಾವೇ ಅರ್ಜಿ ಮತ್ತುದಾಖಲೆ ಪಡೆದು ಹರಾಜು ನಡೀಸ್ತಿವಿ ಎಂದುಖಡಕ್‌ಎಚ್ಚರಿಕೆ ನೀಡಿದರು.

ಸಾಮಾಜಿಕ ಹೋರಾಟಗಾರಜೆಟ್ಟಿಅಗ್ರಹಾರ ನಾಗರಾಜು ಮಾತನಾಡಿ ಎಸ್‌ಸಿಎಸ್‌ಟಿ ಕುಂದುಕೊರತೆ ಸಭೆಗೆ ಸಾಕಷ್ಟ ಅಧಿಕಾರಿಗಳ ಗೈರು ಹಾಜರಿಯಿದೆ.ನೆಪಮಾತ್ರಕ್ಕೆ ಮಾತ್ರ



ಅಧಿಕಾರಿಗಳು ಬರ್ತಾರೇ. ಮೀಸಲಾತಿಕ್ಷೇತ್ರದಲ್ಲಿದಲಿತರ ಸಾವಿರಾರು ಸಮಸ್ಯೆಗಳು ಹಾಗೇ ಪ್ರಶ್ನೆಯಾಗೇ ಉಳಿದಿವೆ. ಗೃಹಸಚಿವರು ಸಭೆಗೆ ಬಂದ್ರೇದಲಿತರ ನೂರಾರು ಸಮಸ್ಯೆಗಳು ಬಗೆಹರಿಯಲಿವೆ.ಶಾಸಕರಾದ ಡಾ.ಜಿ.ಪರಮೇಶ್ವರ್ ಮುಂದಿನ ಸಭೆಗೆ ಬರಬೇಕುಎಂದು ಮನವಿ ಮಾಡಿದರು.

ದಲಿತ ಮುಖಂಡದಾಡಿವೆಂಕಟೇಶ್ ಮಾತನಾಡಿಗಣಿಗಾರಿಕೆ ನಡೆಯುತ್ತಿರುವ ಬಿಕ್ಕೆಗುಟ್ಟೆ ಸುತ್ತಮುತ್ತದಲಿತರೇ ವಾಸ ವಾಡ್ತಿದ್ದಾರೇ. ಗ್ರಾಪಂ ಸದಸ್ಯರುಜನರ ಸಮಸ್ಯೆ ಆಲಿಸುತ್ತಿಲ್ಲ. ಸರಕಾರಿ ಅಧಿಕಾರಿಗಳಿಗೆ ಜನರ ನೋವು ತಿಳಿದುಕೊಳ್ಳುವ ತಾಳ್ಮೆಯೇ ಇಲ್ಲ. ಕ್ರಷರ್‌ನ ಧೂಳು ಮತ್ತುಗಣಿಗಾರಿಕೆ ಶಬ್ದದಿಂದ ಬದುಕು ನಡೆಸುವುದೇಕಷ್ಟಸಾಧ್ಯ. ಗಣಿಗಾರಿಕೆ ಸಮಸ್ಯೆಗಳ ಬಗ್ಗೆ ಗೃಹಸಚಿವರು ಗಮನ ಹರಿಸಬೇಕಿದೆಎಂದುಒತ್ತಾಯ ಮಾಡಿದರು.ಎಸ್‌ಸಿಎಸ್‌ಟಿ ವಾಸಿಸುವ ಪ್ರತಿ ಹಳ್ಳಿಯಲ್ಲೂ ದಿನದ 24ಗಂಟೆಯು ಮಧ್ಯ ಮಾರಾಟ ಮಾಡ್ತಾರೇ .ಅಬಕಾರಿ ಇಲಾಖೆ ಬಡವರಚಿಲ್ಲರೇ ಅಂಗಡಿ ಮಾಲೀಕರ ಮೇಲೆ ಪ್ರಕರಣ ದಾಖಲು ಮಾಡ್ತಾರೇ. ಇಲ್ಲಿಯವರೇಗೆ ವೈನ್ಸ್ ಮಾಲೀಕಅಥವಾ ವ್ಯವಸ್ಥಾಪಕನ ವಿರುದ್ದ ಪ್ರಕರಣದಾಖಲುಆಗಿಲ್ಲ. ಅಬಕಾರಿ ಇಲಾಖೆ ವೈನ್ಸ್ ಮಾಲೀಕರ ಪರವಾಗಿ ಕೆಲಸ ಮಾಡಿದ್ದಾರೇಎಂದುದಲಿತ ಮುಖಂಡರುಆರೋಪ ಮಾಡಿದರು.

ಸಭೆಯಲ್ಲಿ ಸಮಾಜಕ 'ಲ್ಯಾಣಇಲಾಖೆಯ ನಿರ್ದೇಶಕಿಯಮುನಾ, ಸಾಮಾಜಿಕ ವಲಯ ಶಿಲ್ಪಾ, ಅರಣ್ಯಇಲಾಖೆಯ ಸುರೇಶ್, ಕುಡಿಯುವ ನೀರುಕೀರ್ತಿನಾಯಕ್, ಸಿಡಿಪಿಓ ಅಂಬಿಕಾ, ಟಿಹೆಚ್‌ಓ ವಿಜಯುಕುಮಾರ್, ಪಿಎಸ್ಐ ಬಸವರಾಜು, ಪಪಂ ಸದಸ್ಯರಾದ ಪುಟ್ಟನರಸಪ್ಪ, ನಂದೀಶ್, ನಟರಾಜು, ಮುಖಂಡರಾದಜಯರಾಮು, ಸುರೇಶ್, ಸಿದ್ದಪ್ಪ, ಶಿವರಾಮು, ನರಸಿಂಹಮೂರ್ತಿ, ದೊಡ್ಡಯ್ಯ ಸೇರಿದಂತೆ ಇತರರು ಇದ್ದರು.

> **ಅಕ್ರಮ ಮದ್ಯ ಮಾರಾಟ, ಗಣಿಗಾರಿಕೆ ಮತ್ತುಕ್ರಷರ್, ಸಾಗುವಳಿ ಚೀಟಿ, ಹಕ್ಕುಪತ್ರ, ಶುದ್ಧ ಕುಡಿಯುವ ನೀರಿನಘಟಕ, ರಸ್ತೆ, ಚರಂಡಿ, ಸ್ವಚ್ಚತೆ, ಪಪಂ ಅಂಗಡಿ ಮಳಿಗೆ ಸೇರಿ ಹತ್ತಾರು ಸಮಸ್ಯೆಗಳು ಸಭೆಗೆ ಬಂದಿವೆ. ಮಾನ್ಯ ಶಾಸಕರ ಜೊತೆ ಚರ್ಚಿಸಿ ತ್ವರಿತವಾಗಿ ಸಮಸ್ಯೆಗಳಿಗೆ ಪರಿಹಾರ ನೀಡ್ತೇವೆ. ಗ್ರಾಮೀಣ ಜನರ ಸಮಸ್ಯೆ ಆಲಿಸೋದು ಸರಕಾರಿ ಅಧಿಕಾರಿಗಳ ಪ್ರಮುಖ ಕರ್ತವ್ಯ.**
>
> **- ಮಂಜುನಾಥ.ಕೆ., ತಹಶೀಲ್ದಾರ್. ಕೊರಟಗೆರೆ**

- » ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಸ್ಥಳಕ್ಕೆ ಆಗ್ರಹ
- » ವಾಲ್ಮೀಕಿ ಮತ್ತು ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಒತ್ತಾಯ
- » ಪಪಂಯ ಶೇ.25ರಷ್ಟು ಮೀಸಲು ಅನುಧಾನದಲ್ಲಿಯೇ ಲೋಪ
- » ದಲಿತ ಕಾಲೋನಿಗಳಲ್ಲಿ ಹೆಚ್ಚಿದಅಕ್ರಮವಾಗಿ ಮಧ್ಯಮರಾಟ
- » ಪಪಂ ನೂತನ ಅಂಗಡಿ ಮಳಿಗೆಗಳ ಹರಾಜಿಗೆ ಮೀನಾಮೇಷ
- » ಗಣಿಗಾರಿಕೆ ಮತ್ತು ಕ್ರಷರ್ ಆರ್ಭಟದಿಂದ ಜನರಿಗೆ ಸಂಕಷ್ಟ
- » ಕ್ರಷರ್ ಲಾರಿಗಳ ಹಾವಳಿಯಿಂದ ಪಿಡ್ಲ್ಯೂಡಿ ರಸ್ತೆಯಲ್ಲಿ ಗುಂಡಿ
- » ಗಣಿಗಾರಿಕೆಯಿಂದ ಗ್ರಾಪಂಗಳಿಗೆ ಕೊಟ್ಯಾಂತರರೂತೆರಿಗೆ ಬಾಕಿ
- » ಕಾಲಗಾನಹಳ್ಳಿ ಗ್ರಾಮದಲ್ಲಿ ನಿರಂತರ ಜ್ಯೋತಿಯೇ ಮರೀಚಿಕೆ
- » ಚರಂಡಿ ಮತ್ತು ಸ್ವಚ್ಚತೆಯ ಆಧ್ಯತೆಗೆ ದಲಿತ ಮುಖಂಡರ ಆಗ್ರಹ

## 27ನೇ ರಾಜ್ಯ ಮಟ್ಟದ 'ಚುಂಚಾದ್ರಿ ಕ್ರೀಡೋತ್ಸವ'; 21 ಜಿಲ್ಲೆಗಳ ವಿದ್ಯಾರ್ಥಿಗಳು ಭಾಗಿ

# ಪೋಷಕರ ಶ್ರಮ ವಿದ್ಯಾರ್ಥಿಗಳಿಗೆ ಅರಿವು ಅಗತ್ಯ

**ಚಿಕ್ಕಬಳ್ಳಾಪುರ:** ಪೋಷಕರು ತಮ್ಮ ಮಕ್ಕಳ ಶಿಕ್ಷಣ, ಬದುಕಿಗಾಗಿ ಅಪಾರ ಶ್ರಮಪಡುವರು. ಆ ಶ್ರಮದ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದಿರಬೇಕು ಎಂದು ಆದಿಚುಂಚನಗಿರಿ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕಿವಿಮಾತು ಹೇಳಿದರು.

ನಗರ ಹೊರಲಯದ ಎಸ್‌ಜೆಸಿ ತಾಂತ್ರಿಕ ವಿದ್ಯಾಲಯದಲ್ಲಿ ಶುಕ್ರವಾರ ರಾಜ್ಯ ಮಟ್ಟದ 27ನೇ ವರ್ಷದ 'ಚುಂಚಾದ್ರಿ ಕ್ರೀಡೋತ್ಸವ' ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಭವಿಷ್ಯಕ್ಕಾಗಿ ತಂದೆ,ತಾಯಿ ತಮ್ಮ ಭವಿಷ್ಯವನ್ನು ಲೆಕ್ಕಿಸದೆ ದುಡಿಯುತ್ತಾರೆ. ಅದಕ್ಕೆ ಪ್ರತಿಯಾಗಿ ತಾವು ತಮ್ಮ ಕರ್ತವ್ಯವನ್ನು ಚಾಚೂ ತಪ್ಪದೆ ಮಾಡಬೇಕು. ನಿಮ್ಮ ಅಂಕಗಳು ಕಡಿಮೆ ಬಂದರೆ ನಿಮ್ಮ ಪೋಷಕರು ನೊಂದುಕೊಳ್ಳುವರು ಎಂದು ಹೇಳಿದರು.



ಮಾನವ ಸಂಪತ್ತು ದೇಶದ ಮುಖ್ಯ ಸಂಪತ್ತು. ಮಾನವ ಸಂಪತ್ತಿನ ಸರಿಯಾಗಿ ಸದ್ಬಳಕೆ ದೇಶ, ಸಮಾಜವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ.ವಿದ್ಯಾಭ್ಯಾಸದಲ್ಲಿ ಮಕ್ಕಳು ಹೇಗೆ ತೊಡಗಿಸಿಕೊಳ್ಳಬೇಕು,ಯಾವ ವಿಷಯಗಳಿಗೆ ಹೆಚ್ಚು ಒತ್ತು ಕೊಡಬೇಕು,ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಹೇಗೆ ಶ್ರದ್ಧೆಯಿಂದ ಶ್ರಮಪಟ್ಟು ವಿದ್ಯಾಭ್ಯಾಸ ಮಾಡಬೇಕು ಎನ್ನುವ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ್ ಗೌಡ ಮಾತನಾಡಿ, ಇದು ರಾಷ್ಟ್ರಮಟ್ಟದಲ್ಲಿ ನಡೆಯಬೇಕಾದ ಸಮಾರಂಭ ಇಲ್ಲಿ ನೆರೆದಿರುವ ಮಕ್ಕಳು ಭವಿಷ್ಯದಲ್ಲಿ ದೇಶದ ಜವಾಬ್ದಾರಿಯುತ ನಾಗರಿಕರಾಗಬೇಕು. ದೇಶ ಸೇವೆಗಾಗಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಹೇಳಿದರು.ಕಷ್ಟಪಟ್ಟ ಮತ್ತು ಶ್ರದ್ಧಾಭಕ್ತಿಯಿಂದ ಮುನ್ನಡೆದರೆ ಜಯ ನಮ್ಮದಾಗುತ್ತದೆ. ಆದಿಚುಂಚನಗಿರಿ ಮಠವು ಸಮಾಜದ ಏಳಿಗೆಗೆ ಶ್ರಮಿಸುತ್ತಿದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಮಾತನಾಡಿ,ಆದಿಚುಂಚನಗಿರಿ ಮಠವು ಶಿಕ್ಷಣ, ಕ್ರೀಡೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಅದಕ್ಕೆ ಉದಾಹರಣೆಯಾಗಿ ಇಲ್ಲಿ ನೆರೆದಿರುವ ಕ್ರೀಡಾಪಟುಗಳೇ ಸಾಕ್ಷಿ. ಕ್ರೀಡಾಕೂಟಗಳು ದೇಶಗಳ ಒಗ್ಗೂಡಿಕೆಗೆ ಕಾರ್ಯನಿರ್ವಹಿಸುತ್ತದೆ. ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದು ಅತಿ ಮುಖ್ಯ ಕ್ರೀಡಾಕೂಟಗಳು ನಮ್ಮ ಮನಸ್ಸು ಮತ್ತು ದೇಹದ ಉಲ್ಲಾಸಕ್ಕೆ ಕಾರಣವಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ ಮಾತನಾಡಿ ಕ್ರೀಡೆಯಿಂದ ಮಾನಸಿಕ ಹಾಗೂ ದೈಹಿಕ ಶಕ್ತಿಯು ವೃದ್ಧಿಯಾಗುತ್ತದೆ ಎಂದರು.ಮುಖ್ಯವಾಗಿ ಮಕ್ಕಳು ತುರ್ತು ಸಂದರ್ಭದಲ್ಲಿ 112ಕ್ಕೆ ಕರೆ ಮಾಡುವ ಬಗ್ಗೆ ಹಾಗೂ ಸೈಬರ್ ಕ್ರೈಂ ಕುರಿತು ವಿವರಿಸಿದರು.


ಕರ್ನಾಟಕ ಕಬಡ್ಡಿ ತಂಡದ ಮಾಜಿ ನಾಯಕಿ ಉಷಾರಾಣಿ ಕ್ರೀಡಾಕೂಟ ಉದ್ಘಾಟಿಸಿದರು. ನ್ಯೂಸ್ ಫಸ್ಟ್ ನ ಸಿಇಓ ಎಸ್.ರವಿಕುಮಾರ್ ಕ್ರೀಡಾಪಟುಗಳಿಗೆ ಪ್ರಮಾಣ ವಚನ ಬೋಧಿಸಿ ಮಾತನಾಡಿದ ಅವರು ನನ್ನ ತವರು ಜಿಲ್ಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಿರೋದು ಇದೇ ಮೊದಲು.ಆಟ ಪಾಠದ ಜೊತೆಗೆ ಸಂಸ್ಕಾರ ಕಲಿಸೋದರಲ್ಲಿ ಚುಂಚನಗಿರಿ ಶಾಲೆಯೊಂದೆ ಎಂದು ತಿಳಿಸಿದರು.

ಆದಿಚುಂಚನಗಿರಿಯ ವಿವಿಧ ಶಾಖಾ ಮಠಗಳ ಮಂಗಳನಾಥ ಸ್ವಾಮೀಜಿ, ಪುರುಷೋತಮಾ ನ0ದನಾಥ ಸ್ವಾಮೀಜಿ, ಪ್ರಸನ್ನನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಶಂಭುನಾಥ ಸ್ವಾಮೀಜಿ, ಅನ್ನದಾನೇಶ್ವರನಾಥ ಸ್ವಾಮೀಜಿ, ಗುಣನಾಥ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ, ಚೈತನ್ಯನಾಥ ಸ್ವಾಮೀಜಿ, ಶಿವಪುತ್ರನಾಥ ಸ್ವಾಮೀಜಿ, ಆದಿಚುಂಚನಗಿರಿ ವಿಶ್ವ ವಿದ್ಯಾಲಯ ಕುಲಪತಿ ಎಂ.ಎ ಶೇಖರ್, ಅಮೆರಿಕದ ಮಿಚಿಗನ್ ಬೋರ್ಡ್ ಅಧ್ಯಕ್ಷ ಅಮರನಾಥಗೌಡ, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್. ಶಿವರಾಮರೆಡ್ಡಿ, ಎಸ್‌ಜೆಸಿಐಟಿ ಪ್ರಾಂಶುಪಾಲ ಜಿ.ಟಿ ರಾಜು, ಕುಲಸಚಿವ ಜಿ. ಸುರೇಶ್ ಪಾಲ್ಗೊಂಡಿದ್ದರು.

## ಸುದ್ದಿ ಸಂಜೆ

### ಓಪನ್ ಎಐ ಮಾಜಿ ಸಂಶೋಧಕ ಸುಚಿರ್ ಬಾಲಾ ಆತ್ಮಹತ್ಯೆ

ವಾಷಿಂಗ್ಟನ್: ಓಪನ್ ಎಐ ಮಾಜಿ ಸಂಶೋಧಕ ಸುಚಿರ್ ಬಾಲಾಜಿ ಅವರು ಆತಹತ್ಯೆ ಮಾಡಿಕೊಂಡಿರುವ ಪ್ರಕರಣ ತಡವಾಗಿ ವರದಿಯಾಗಿದೆ. ಕಳೆದ ನವೆಂಬರ್ 26 ರಂದು ಸ್ಯಾನ್ ಫ್ರಾನ್ಸಿಸ್ಕೊ ಅಪಾರ್ಟ್ ಮೆಂಟ್‌ನಲ್ಲಿ ಥ್ಯಾಂಕ್ಸ್ ಗಿವಿಂಗ್ ದಿನದ ನಂತರ ಶವವಾಗಿ ಅವರು ಪತ್ತೆಯಾಗಿದ್ದಾರೆ. ಅಧಿಕಾರಿಗಳು ಸಾವನ್ನು ಸ್ಪಷ್ಟವಾಗಿ ಆತಹತ್ಯೆ ಎಂದು ತೀರ್ಪು ನೀಡಿದ್ದಾರೆ, ಆರಂಭಿಕ ತನಿಖೆಯು ಫೌಲ್ ಪ್ಲೇಯ ಯಾವುದೇ ಪುರಾವೆಗಳನ್ನು ತೋರಿಸುತ್ತಿಲ್ಲ ಎಂದು ತಿಳಿಸಿದ್ದಾರೆ. ಅಕ್ಟೋಬರ್‌ನಲ್ಲಿ 26 ವರ್ಷ ವಯಸ್ಸಿನ ಸಂಶೋಧಕರು ಓಪನ್ ಎಐ ಅನ್ನು ತೊರೆದಿದ್ದರು.



**ಸುಚಿರ್ ಬಾಲಾಜಿ ಯಾರು?**

ಸುಚಿರ್ ಬಾಲಾಜಿ ಅವರು ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ 2021 ರಲ್ಲಿ ಕಂಪ್ಯೂಟರ್ ಸೈನ್ಸ್ ನಲ್ಲಿ ಪದವಿ ಪಡೆದರು. ಬಾಲಾಜಿ ಪ್ರೋಗ್ರಾಮಿಂಗ್ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡಿದರು,

ಎಸಿಎಂ ಐಸಿಪಿಸಿ 2018 ವರ್ಲ್ಡ್ ಫೈನಲ್ಸ್ ನಲ್ಲಿ 31 ನೇ ಸ್ಥಾನವನ್ನು ಪಡೆದರು ಮತ್ತು 2017 ರ ಪೆಸಿಫಿಕ್ ವಾಯುವ್ಯ ಪ್ರಾದೇಶಿಕ ಮತ್ತು ಬರ್ಕ್ಲಿ ಪ್ರೋಗ್ರಾಮಿಂಗ್ ಸ್ಪರ್ಧೆಗಳಲ್ಲಿ ಮೊದಲ ಸ್ಥಾನವನ್ನು ಗೆದ್ದರು.

ಅವರು ಕಾಗ್ಲೆ ಅವರ ಟಿಎಸ್‌ಎ ಪ್ರಾಯೋಜಿತ ಪ್ಯಾಸೆಂಜರ್ ಸ್ಕ್ರೀನಿಂಗ್ ಅಲ್ಗಾರಿದಮ್ ಚಾಲೆಂಜ್‌ನಲ್ಲಿ 7 ನೇ ಸ್ಥಾನವನ್ನು ಗಳಿಸಿದರು, 100,000 ಬಹುಮಾನವನ್ನು ಗಳಿಸಿದರು. ಅವರ ಲಿಂಕ್‌ಇನ್ ಪ್ರೊಫೈಲ್‌ನ ಪ್ರಕಾರ ಅವರು ಅಮೆರಿಕ ಓಪನ್ 2016 ರಾಷ್ಟ್ರೀಯ ಚಾಂಪಿಯನ್ ಮತ್ತು ಯುಸಾಕೋ ಫೈನಲಿಸ್ಟ್ ಆಗಿದ್ದರು.

26 ವರ್ಷ ವಯಸ್ಸಿನವರು ಕಂಪನಿಯ ಅಭ್ಯಾಸಗಳ ಬಹಿರಂಗ ವಿಮರ್ಶಕರಾಗುವ ಮೊದಲು ಚಾಟ್‌ಜಿಪಿಟಿಯಲ್ಲಿ ಒಂದೂವರೆ ವರ್ಷ ಸೇರಿದಂತೆ ಓಪನ್ ಎಐ ನಲ್ಲಿ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದರು. ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಅಕ್ಟೋಬರ್ ಲೇಖನದಲ್ಲಿ, ಅವರು ಓಪನ್ ಎಐ ಹಕ್ಕುಸ್ವಾಮ್ಯ ಕಾನೂನುಗಳನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದರು,

ನಾನು ನಂಬಿದ್ದನ್ನು ನೀವು ನಂಬಿದರೆ, ನೀವು ಕಂಪನಿಯನ್ನು ತೊರೆಯಬೇಕಾಗುತ್ತದೆ ಎಂದು ಸಂಸ್ಥೆ ಎಚ್ಚರಿಕೆ ನೀಡಿದ ನಂತರ ಅವರು ಕೆಲಸ ಬಿಟ್ಟಿದ್ದರು.

## ಒಂದು ರಾಷ್ಟ್ರ, ಒಂದು ಚುನಾವಣೆ ಕುರಿತು ಪಾರದರ್ಶಕ ಚರ್ಚೆಯಾಗಲಿ

**ನವದೆಹಲಿ:** 'ಒಂದು ರಾಷ್ಟ್ರ, ಒಂದು ಚುನಾವಣೆ' ಕುರಿತಾಗಿ ಪಾರದರ್ಶಕ ಚರ್ಚೆ ನಡೆಯಬೇಕೆಂದು ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಶುಕ್ರವಾರ ಹೇಳಿದ್ದಾರೆ. ಈ ವಿಷಯದ ಬಗ್ಗೆ ಸಂಸತ್ತಿನಲ್ಲಿ ಪಾರದರ್ಶಕವಾಗಿ ಚರ್ಚೆ ನಡೆಯಲಿ ಮತ್ತು 2019ರಲ್ಲಿ 370 ನೇ ವಿಧಿಯೊಂದಿಗೆ ಮಾಡಿದಂತೆ ಇದನ್ನೂ ಮಾಡಬಾರದು ಎಂದು ಅವರು ಆಗ್ರಹಿಸಿದರು.

ಒಂದು ರಾಷ್ಟ್ರ, ಒಂದು ಚುನಾವಣೆ ಸಾಧ್ಯವಿಲ್ಲ: ಏತನ್ಮಧ್ಯೆ ಇದೇ ವಿಷಯದ ಬಗ್ಗೆ ಮಾತನಾಡಿದ ಹಿರಿಯ ಕಾಂಗ್ರೆಸ್ ಮುಖಂಡ ಮತ್ತು ವಿಧಾನಸಭೆಯ ಸದಸ್ಯ ಜಿ.ಎ.ಮಿರ್, 'ಒಂದು ರಾಷ್ಟ್ರ, ಒಂದು ಚುನಾವಣೆ' ಕಲ್ಪನಾತೀತವಾಗಿದೆ. ಇದನ್ನು ಭಾರತದಂಥ ದೊಡ್ಡ ದೇಶದಲ್ಲಿ ಜಾರಿಗೆ ತರಲು ಸಾಧ್ಯವಿಲ್ಲ ಎಂದು ಹೇಳಿದರು. ಇಂತಹ ವಿಷಯಗಳನ್ನು ಮುನ್ನೆಲೆಗೆ ತಂದು ಬಿಜೆಪಿ ತನ್ನ ವೈಫಲ್ಯಗಳನ್ನು ಮರೆಮಾಚಲು ಪ್ರಯತ್ನಿಸುತ್ತಿದೆ ಎಂದು ಮಿರ್ ಆರೋಪಿಸಿದರು

"ಒಂದು ರಾಷ್ಟ್ರ, ಒಂದು ಚುನಾವಣೆ ಕಲ್ಪನೆಯು ಕಲ್ಪನೆಗೂ ಮೀರಿದೆ ಮತ್ತು ಭಾರತದಂತಹ ದೊಡ್ಡ ದೇಶದಲ್ಲಿ ಅದನ್ನು ಕಾರ್ಯಗತಗೊಳಿಸಲು ಸಾಧ್ಯವಿಲ್ಲ. ಸಂಸತ್ತಿನಲ್ಲಿ ಈ ಬಗ್ಗೆ ಚರ್ಚೆ ನಡೆಯಲಿದೆ ಮತ್ತು ಎಲ್ಲಾ ಪಕ್ಷಗಳು ತಮ್ಮ ದೃಷ್ಟಿಕೋನವನ್ನು ಪ್ರಸ್ತುತಪಡಿಸಲಿವೆ. ಆದರೆ, ಇದು ಸಣ್ಣ ದೇಶವಲ್ಲ. ಇದು ದೊಡ್ಡ ಪ್ರಜಾಪ್ರಭುತ್ವದ ದೇಶ. ಸಂಸತ್ತು, ವಿಧಾನಸಭೆಗಳು, ಪಂಚಾಯತ್‌ಗಳು ಅಥವಾ ಪುರಸಭೆಗಳು ಸೇರಿದಂತೆ ಈ ದೇಶದಲ್ಲಿ ನಾವು ಎಲ್ಲಾ ಚುನಾವಣೆಗಳನ್ನು ಒಂದೇ ಸಮಯದಲ್ಲಿ ನಡೆಸುವುದನ್ನು ಊಹಿಸಲೂ ಸಾಧ್ಯವಿಲ್ಲ" ಎಂದು ಮಿರ್ ಸುದ್ದಿಗಾರರಿಗೆ ತಿಳಿಸಿದರು.

ದೇಶಕ್ಕೆ ಒಳ್ಳೆಯದು ಎಂದ ಪ್ರಶಾಂತ್ ಕಿಶೋರ್: ಇನ್ನು ಒಂದು ರಾಷ್ಟ್ರ, ಒಂದು ಚುನಾವಣೆ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ರಾಜಕೀಯ ತಂತ್ರಜ್ಞ ಮತ್ತು ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಕಿಶೋರ್, ಸದುದ್ದೇಶದಿಂದ ಈ ವ್ಯವಸ್ಥೆಯನ್ನು ಜಾರಿಗೆ ತಂದರೆ ಒಂದು ರಾಷ್ಟ್ರ ಒಂದು ಚುನಾವಣೆ ದೇಶಕ್ಕೆ ಪ್ರಯೋಜನಕಾರಿಯಾಗಬಹುದು ಎಂದು ಹೇಳಿದರು.

"ಕನಿಷ್ಠ 1960 ರ ದಶಕದವರೆಗೆ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆಯುತ್ತಿದ್ದವು. ಮತ್ತೊಮ್ಮೆ ಅದೇ ರೀತಿಯಾದರೆ ಅದು ದೇಶಕ್ಕೆ ಒಳ್ಳೆಯದು. ಆದರೆ ಪರಿವರ್ತನೆಯು ಸುಗಮವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಅಂಥ ಬದಲಾವಣೆಯನ್ನು ರಾತ್ರೋರಾತ್ರಿ ತರಲು ಪ್ರಯತ್ನಿಸಬಾರದು" ಎಂದು ಅವರು ಹೇಳಿದರು.

## ಸಿನಿಮಾ ತಾರೆಯೇ ಇರಲಿ ರಾಜಕೀಯ ನೇತಾರನೇ ಆಗಿರಲಿ, ಇದ್ಯಾವುದನ್ನೂ ನೋಡಲ್ಲ



**ಹೈದರಾಬಾದ್;** ಅಲ್ಲು ಅರ್ಜುನ್ ಬಂಧನ ಮತ್ತು ಜಾಮೀನಿನ ಬಗ್ಗೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಪ್ರತಿಕ್ರಿಯಿಸಿದ್ದಾರೆ. ಅಲ್ಲು ಅರ್ಜುನ್ ತಮ್ಮಷ್ಟಕ್ಕೆ ತಾವು ಬಂದು ಸಿನಿಮಾ ನೋಡಿ ಹೋಗಿದ್ದರೆ ಇಷ್ಟೊಂದು ಗಲಾಟೆ ಆಗುತ್ತಿರಲಿಲ್ಲ ಎಂದಿದ್ದಾರೆ. ದೆಹಲಿಯಲ್ಲಿ ಮಾತನಾಡಿದ ಅವರು, ಅಲ್ಲು ಅರ್ಜುನ್ ಬಂಧನದ ಘಟನೆ ಕುರಿತು ಪ್ರತಿಕ್ರಿಯಿಸಿದ್ದಾರೆ.

ಅಂಬೇಡ್ಕರ್ ರಚಿಸಿದ ಸಂವಿಧಾನ ದೇಶದ ಸಾಮಾನ್ಯ ಪ್ರಜೆಯಿಂದ ಹಿಡಿದು ಪ್ರಧಾನಿಯವರೆಗೆ ಎಲ್ಲರಿಗೂ ಒಂದೇ. ಎಲ್ಲರಿಗೂ ಅದು ಸಮಾನವಾಗಿ ಅನ್ವಯವಾಗುತ್ತದೆ ಎಂದು ಸಿಎಂ ರೇವಂತ ರೆಡ್ಡಿ ಸ್ಪಷ್ಟಪಡಿಸಿದ್ದಾರೆ. 'ಪುಷ್ಪ–2' ಬಿಡುಗಡೆ ಸಂದರ್ಭದಲ್ಲಿ ಬೆನಿಫಿಟ್ ಶೋ ಜೊತೆಗೆ ಟಿಕೆಟ್ ದರ ಏರಿಕೆಗೂ ಎಸ್ ಎಂದಿದ್ದಾರೆ. ಇನ್ನು ನಟ ಅಲ್ಲು ಅರ್ಜುನ್ ಬೆನಿಫಿಟ್ ಶೋಗೆ ಅನುಮತಿ ಇಲ್ಲದೆಯೇ ಸಿನಿಮಾ ಮಂದಿರಕ್ಕೆ ಆಗಮಿಸಿದ್ದರು ಎಂದು ಸಿಎಂ ತಿಳಿಸಿದ್ದಾರೆ.

ಇದ್ದಕ್ಕಿದ್ದಂತೆ ಥೇಟರ್‌ಗೆ ಕಾರಿನಲ್ಲಿ ಆಗಮಿಸಿದ ಅವರು ಕಾರಿನಿಂದ ಇಳಿದು ರ‍್ಯಾಲಿ ತರಹ ನಡೆದಿದ್ದಾರೆ. ಈ ವೇಳೆ ಅಲ್ಲು ಅರ್ಜುನ್ ನೋಡಲು ಅಭಿಮಾನಿಗಳು ಮುಗಿಬಿದ್ದಿದ್ದಾರೆ. ಇದರಿಂದ ಕಾಲ್ತುಳಿತ ಆಗಿದೆ. ಈ ಸಂದರ್ಭದಲ್ಲಿ ಮಹಿಳೆಯೊಬ್ಬರು ಸಾವನ್ನಪ್ಪಿದ್ದು, ಮೃತ ಮಹಿಳೆಯ ಮಗನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮುಖ್ಯಮಂತ್ರಿ ಘಟನೆಯ ಮಾಹಿತಿ ನೀಡಿದರು.

"ಸಿನಿಮಾ ತಾರೆ, ರಾಜಕೀಯ ನೇತಾರ ಎಂಬುದನ್ನು ನಮ್ಮ ಸರ್ಕಾರ ನೋಡುವುದಿಲ್ಲ. ಘಟನೆ ಏನು, ಆರೋಪಗಳೇನು ಎಂಬುದನ್ನು ಮಾತ್ರವೇ ನಾವು ನೋಡುತ್ತೇವೆ. ಘಟನೆಯಲ್ಲಿ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ಇದಕ್ಕೆ ಯಾರು ಹೊಣೆ?. ನೀವು ಪ್ರೇಕ್ಷಕರೊಂದಿಗೆ ಸಿನಿಮಾ ನೋಡಬೇಕು ಎಂಬುದೇ ಆಗಿದ್ದರೆ, ಈ ವಿಚಾರವನ್ನು ಪೊಲೀಸರಿಗೆ ಮೊದಲೇ ತಿಳಿಸಬೇಕಿತ್ತು ಹಾಗೂ ಅವರಿಂದ ಒಪ್ಪಿಗೆ ಪಡೆದುಕೊಳ್ಳಬೇಕಾಗಿತ್ತು ಎಂದು ರೇವಂತ ರೆಡ್ಡಿ ಹೇಳಿದ್ದಾರೆ.

ಅಲ್ಲು ಅರ್ಜುನ್ ತಮಗೆ ಬಾಲ್ಯದಿಂದಲೂ ಗೊತ್ತು, ಉದ್ದೇಶಪೂರ್ವಕವಾಗಿ ಅವರನ್ನು ಏಕೆ ಬಂಧಿಸುತ್ತೇವೆ ನೀವೇ ಹೇಳಿ ಎಂದು ಪ್ರಶ್ನಿಸಿರುವ ಸಿಎಂ ರೇವಂತ್ ರೆಡ್ಡಿ, ಅಲ್ಲು ಅರ್ಜುನ್ ಅವರ ಸಂಬಂಧಿಗಳಾಗಿರುವ ಚಿರಂಜೀವಿ ಕಾಂಗ್ರೆಸ್ ನಾಯಕರಾಗಿದ್ದು, ಅವರ ಇನ್ನೊಬ್ಬ ಸಂಬಂಧಿಗಳಾದ ಚಂದ್ರಶೇಖರ್ ರೆಡ್ಡಿ ಕೂಡ ಕಾಂಗ್ರೆಸ್‌ನಲ್ಲಿದ್ದಾರೆ ಎಂದು ಇದೇ ವೇಳೆ ಸಿಎಂ ನೆನಪು ಮಾಡಿಕೊಟ್ಟರು.

ಪೊಲೀಸರು ಕಾನೂನು ಸುವ್ಯವಸ್ಥೆಗೆ ತಕ್ಕಂತೆ ಕಾರ್ಯನಿರ್ವಹಿಸುತ್ತಾರೆ ಎಂದು ಇದೇ ವೇಳೆ ಅವರು ಸ್ಪಷ್ಟಪಡಿಸಿದರು.

## ಎಂಬಿಎ ವಿದ್ಯಾರ್ಥಿಗಳ ವೆಲ್ ಕಮ್ ಕಾರ್ಯಕ್ರಮ




**ಬೆಂಗಳೂರು :** ಆರ್ ವಿ ಕಾಲೇಜಿನ MBA ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ನ ಆರ್ ವಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ವತಿಯಿಂದ ನಾಲ್ಕನೇ ವರ್ಷದ ಎಂಬಿಎ ವಿದ್ಯಾರ್ಥಿಗಳ ವೆಲ್ ಕಮ್ ಕಾರ್ಯಕ್ರಮ ಆಯೋಜಿಸಲಾಗಿತ್ತು. ಜೆಪಿ ನಗರದ ಡಿಎಪಿಎಂ ಡೆಂಟಲ್ ಕಾಲೇಜಿನ ಆಡಿಟೋರಿಯಮ್ ನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಈ ವರುಷ ರ‍್ಯಾಂಕಿಂಗ್ ಆಧಾರದ ಮೇಲೆ ಕಾಲೇಜಿಗೆ ಅಡ್ಮಿಷನ್ ಆಗಿರುವ 180 ಎಂಬಿಎ ವಿದ್ಯಾರ್ಥಿಗಳಿಗೆ ಕಾಲೇಜು ಆಡಳಿತ ಮಂಡಳಿ ಸ್ವಾಗತ ಕೋರಿತು. ಉತ್ತಮ ರ‍್ಯಾಂಕ್ ಪಡೆದು ಸಾಧನೆ ಮಾಡಿದ ಮೊದಲ 15 ಎಂಬಿಎ ವಿದ್ಯಾರ್ಥಿಗಳಿಗೆ ಕಾಲೇಜು ಕಡೆಯಿಂದ ತಲಾ 50 ಸಾವಿರ ಸ್ಕಾಲರ್ ಶಿಪ್ ನೀಡಲಾಯಿತು. ಕಾರ್ಯಕ್ರಮದ ಅತಿಥಿಗಳಾಗಿ ಡಾ ಪವನ್ ಸೋನಿ, ಸಿಎ ಡಾ ವಿಷ್ಣುಭರತ್ ಆಗಮಿಸಿದ್ದರು. ಕಾಲೇಜಿನ ಡಾ ಪುರುಷೋತ್ತಮ, ಡಾ ಎವಿಎಸ್ ಮೂರ್ತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



**ಶ್ರೀ ಹನುಮ ಜಯಂತಿ ಪ್ರಯುಕ್ತ ಕುರುಬರಹಳ್ಳಿ ಮುಖ್ಯರಸ್ತೆ ಶಂಕರ ಮಠದ ಶ್ರೀ ಬಾಲಸುಬ್ರಹ್ಮಣ್ಯ ಸ್ವಾಮಿ ಸೇವಾ ಸಮಿತಿ ವತಿಯಿಂದ ಸಹಸ್ರ ದೀಪಾ ಆರಾಧನಾ ಮಹೋತ್ಸವ, ದೀಪ ಪ್ರಾಕಾರೋತ್ಸವ ಹಮ್ಮಿಕೊಂಡಿತ್ತು ಹಾಗೂ ಅಖಂಡ ಶಿವ ದೀಪಾ ದರ್ಶನದ ಕಾರ್ಯಕ್ರದಲ್ಲಿ ಮಾಜಿ ಸಚಿವರು ಹಾಗೂ ಸ್ಥಳೀಯ ಶಾಸಕರಾದ ಕೆ ಗೋಪಾಲಯ್ಯನವರು ದೇವರುಗಳಿಗೆ ಶಿವ ದೀಪದ ದರ್ಶನ್ ನೆರವೇರಿಸಿದರು. ದೀಪಾ ಆರಾಧನ ಮಹೋತ್ಸವದಲ್ಲಿ ಬಿಬಿಎಂಪಿ ಮಾಜಿ ಉಪ ಮೇಯರ್ ಹೇಮಲತಾ, ಮಾಜಿ ಪಾಲಿಕೆ ಸದಸ್ಯೆರುಗಳಾದ ಪದ್ಮಾವತಿ ಶ್ರೀನಿವಾಸ್, ನಾಗರತ್ನ ಲೋಕೇಶ್, ಬಿಜೆಪಿ ಉತ್ತರ ಘಟಕದ ಉಪಾಧ್ಯಕ್ಷ ಜಯರಾಮಯ್ಯ, ಪ್ರೀತಿ ಮಂಜುನಾಥ್ ಗೌಡ ಮುಖಂಡರುಗಳಾದ ಡಾಬಾ ಶ್ರೀನಿವಾಸ್, ಮಂಜುನಾಥ್, ರಘು ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.**

## ಬಿಜೆಪಿ ವಿರುದ್ಧ ವಾಗ್ದಾಳಿ, ಜಾತಿ ಗಣತಿಗೆ ಬೆಂಬಲ:

# ಲೋಕಸಭೆಯಲ್ಲಿ ಪ್ರಿಯಾಂಕಾ ಗಾಂಧಿ ಚೊಚ್ಚಲ ಭಾಷಣ

**ನವದೆಹಲಿ:** ಭಾರತದ ಸಂವಿಧಾನವನ್ನು ಅಂಗೀಕರಿಸಿದ 75ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ಮಹತ್ವದ ಚರ್ಚೆಯ ಸಂದರ್ಭದಲ್ಲಿ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಶುಕ್ರವಾರ ಲೋಕಸಭೆಯಲ್ಲಿ ತಮ್ಮ ಮೊದಲ ಭಾಷಣ ಮಾಡಿದರು.

ನವೆಂಬರ್ 26, 1949 ರಂದು ಸಂವಿಧಾನವನ್ನು ಅಂಗೀಕರಿಸಿದಾಗಿನಿಂದ ಅದರ ವಿಕಾಸ ಮತ್ತು ಮಹತ್ವದ ಮೇಲೆ ಕೇಂದ್ರೀಕೃತವಾಗಿ ನಡೆಯುತ್ತಿರುವ ಎರಡು ದಿನಗಳ 'ಭಾರತದ ಸಂವಿಧಾನದ 75 ವರ್ಷಗಳ ಭವ್ಯ ಪ್ರಯಾಣದ ಚರ್ಚೆಯ ಭಾಗವಾಗಿ ಪ್ರಿಯಾಂಕಾ ಗಾಂಧಿ ವಾದ್ರಾ ಸಂಸತ್ತಿನಲ್ಲಿ ಮಾತನಾಡಿದರು.

ಜಾತಿ ಜನಗಣತಿಗೆ ಆಗ್ರಹ: ಭಾರತದಲ್ಲಿ ಜಾತಿ ಜನಗಣತಿ ನಡೆಸಬೇಕೆಂದು ಅವರು ತಮ್ಮ ಚೊಚ್ಚಲ ಭಾಷಣದಲ್ಲಿ ಪ್ರತಿಪಾದಿಸಿದರು. ಜಾತಿ ಜನಗಣತಿ ನಡೆಸುವುದು ಜನರ ಬೇಡಿಕೆಯಾಗಿದೆ ಎಂದು ಅವರು ಹೇಳಿದರು. ನೀತಿ ನಿಯಮಗಳನ್ನು ರಚಿಸುವಾಗ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಜಾತಿಜನಗಣತಿ ಮಾಹಿತಿಯ ಮಹತ್ವವನ್ನು ಒತ್ತಿ ಹೇಳಿದರು.ರಾಜಕೀಯ ಚರ್ಚೆಗಳಲ್ಲಿ ಮಾಜಿ ಪ್ರಧಾನಿ ಜವಾಹರ ಲಾಲ್ ನೆಹರು ಅವರನ್ನು ಗುರಿಯಾಗಿಸಿಕೊಂಡು ಟೀಕಿಸುವ ಭಾರತೀಯ ಜನತಾ ಪಕ್ಷವನ್ನು ಅವರು ತರಾಟೆಗೆ ತೆಗೆದುಕೊಂಡರು.

"ನೆಹರೂ ಅವರ ಹೆಸರನ್ನು ಪುಸ್ತಕಗಳು ಮತ್ತು ಭಾಷಣಗಳಿಂದ ಅಳಿಸಿಹಾಕಬಹುದು, ಆದರೆ ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಪಾತ್ರವನ್ನು ಅಳಿಸಿಹಾಕಲಾಗುವುದಿಲ್ಲ" ಎಂದ ಅವರು ಆಧುನಿಕ ಭಾರತವನ್ನು ರೂಪಿಸುವಲ್ಲಿ ನೆಹರೂ ಅವರ ಶಾಶ್ವತ ಪರಂಪರೆಯನ್ನು ಸಮರ್ಥಿಸಿಕೊಂಡರು.

"ನಮ್ಮ ಸ್ವಾತಂತ್ರ್ಯ ಹೋರಾಟವು ಸತ್ಯ ಮತ್ತು ಅಹಿಂಸೆಯ ತತ್ವಗಳಿಂದ ಕೂಡಿದ್ದು ಅದು ವಿಶ್ವದ ಇತರ ಯಾವುದೇ ಹೋರಾಟಗಳಿಗಿಂತ ಭಿನ್ನವಾಗಿತ್ತು" ಎಂದು ಅವರು ಹೇಳಿದರು.

"ಈ ವಿಶಿಷ್ಟ ವಿಧಾನವು ನಮ್ಮ ಹಾದಿಯನ್ನು ವಿಭಿನ್ನವಾಗಿಸಿತು ಮತ್ತು ಸಂವಿಧಾನವು ಜನರಿಗೆ ನ್ಯಾಯದ ಹಕ್ಕನ್ನು ಗುರುತಿಸುವ ಶಕ್ತಿಯನ್ನು ನೀಡಿತು. ಸರ್ಕಾರದ ವಿರುದ್ಧ ಧ್ವನಿ ಎತ್ತುವ ಶಕ್ತಿ ಅವರಿಗೆ ಇದೆ ಎಂಬ ಅರಿವನ್ನು ಸಂವಿಧಾನವು ಜನರಿಗೆ ಮೂಡಿಸಿತು" ಎಂದು ವಯನಾಡ್ ಸಂಸದೆ ಪ್ರಿಯಾಂಕಾ ತಿಳಿಸಿದರು.



ಭಾರತೀಯ ಸಂವಿಧಾನವು ಜನರನ್ನು ರಕ್ಷಿಸುವ 'ಸುರಕ್ಷಾ ಕವಚ' (ಗುರಾಣಿ)ವಾಗಿದೆ ಎಂದು ಬಣ್ಣಿಸಿದ ಅವರು ಆಡಳಿತ ಪಕ್ಷವು ಅದನ್ನು ದುರ್ಬಲಗೊಳಿಸಲು ಪದೇ ಪದೇ ಪ್ರಯತ್ನಿಸುತ್ತಿದೆ ಎಂದು ವಿಷಾದಿಸಿದರು. "ದುರದೃಷ್ಟವಶಾತ್, ಆಡಳಿತ ಪಕ್ಷವು ಆ ಗುರಾಣಿಯನ್ನು ನಾಶ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಿದೆ" ಎಂದು ಅವರು ಹೇಳಿದರು.

ಮೀಸಲಾತಿಯ ನೀತಿಗಳನ್ನು ದುರ್ಬಲಗೊಳಿಸುವ ಸರ್ಕಾರದ ಪ್ರಯತ್ನಗಳ ಬಗ್ಗೆ, ವಿಶೇಷವಾಗಿ ಹಿಂಬಾಗಿಲ ಪ್ರವೇಶ ಮತ್ತು ಖಾಸಗೀಕರಣ ಉಪಕ್ರಮಗಳ ಬಗ್ಗೆ ಕಾಂಗ್ರೆಸ್ ನಾಯಕಿ ಕಳವಳ ವ್ಯಕ್ತಪಡಿಸಿದರು.

"ಲೋಕಸಭಾ ಚುನಾವಣಾ ಫಲಿತಾಂಶಗಳು ಆ ರೀತಿ ಬಂದಿಲ್ಲದಿದ್ದರೆ ಬಿಜೆಪಿಯವರು ಈಗಾಗಲೇ ಸಂವಿಧಾನವನ್ನು ಬದಲಾಯಿಸಲು ಪ್ರಾರಂಭಿಸುತ್ತಿದ್ದರು" ಎಂದು ಅವರು ನುಡಿದರು.

ಇಂದಿನ ಚರ್ಚೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರಾರಂಭಿಸಿದರು. ಚರ್ಚೆಯು ಬಹುತೇಕ ಭಾರತದ ಸಂವಿಧಾನದ ಪ್ರಾಮುಖ್ಯತೆಯ ಸುತ್ತಲೂ ನಡೆಯುತ್ತಿದ್ದರೂ, ಪ್ರಿಯಾಂಕಾ ಗಾಂಧಿ ಅವರು ಇದೇ ಮೊದಲ ಬಾರಿಗೆ ಸದನಕ್ಕೆ ಪಾದಾರ್ಪಣೆ ಮಾಡಿದ್ದು ಹಾಗೂ ಚೊಚ್ಚಲ ಭಾಷಣ ಮಾಡಿದ್ದು ವಿಶೇಷ ಗಮನ ಸೆಳೆಯಿತು.

ಸಂವಿಧಾನ ರಚನೆಯಲ್ಲಿ ಹಲವಾರು ನಾಯಕರ ಕೊಡುಗೆಯನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಗಿದೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ರಾಜನಾಥ್ ಸಿಂಗ್, ಒಂದು ನಿರ್ದಿಷ್ಟ ಪಕ್ಷವು ಯಾವಾಗಲೂ ಸಂವಿಧಾನದ ರಚನೆಯನ್ನು 'ಹೈಜಾಕ್ ಮಾಡಲು ಮತ್ತು ಸ್ವಾಧೀನಪಡಿಸಿಕೊಳ್ಳಲು' ಪ್ರಯತ್ನಿಸುತ್ತದೆ ಎಂದು ಪ್ರತಿಪಾದಿಸಿದರು.

ಸಂವಿಧಾನವು ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಹೇಳಿದೆ ಮತ್ತು ರಾಷ್ಟ್ರಕ್ಕೆ ಯಾವುದೇ ಧರ್ಮವಿರುವುದಿಲ್ಲ ಮತ್ತು ಅದು ಜಾತ್ಯತೀತವಾಗಿರುತ್ತದೆ ಎಂದು ನಿರ್ದಿಷ್ಟಪಡಿಸಲಾಗಿದೆ ಎಂದು ಅವರು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಡಿಸೆಂಬರ್ 14 ರಂದು ಸಂಜೆ ಚರ್ಚೆಗೆ ಉತ್ತರಿಸುವ ನಿರೀಕ್ಷೆಯಿದೆ. ಎಚ್.ಡಿ.ಕುಮಾರಸ್ವಾಮಿ ಮತ್ತು ಶ್ರೀಕಾಂತ್ ಶಿಂಧೆ ಅವರಂಥ ಹಲವಾರು ಪ್ರಮುಖರು ಸೇರಿದಂತೆ ಬಿಜೆಪಿಯ ನಾಯಕರು ತಮ್ಮ ದೃಷ್ಟಿಕೋನಗಳನ್ನು ಸಂಸತ್ತಿನಲ್ಲಿ ಮಂಡಿಸಲಿದ್ದಾರೆ.

ಆಡಳಿತಾರೂಢ ಎನ್‌ಡಿಎ ಮತ್ತು ಪ್ರತಿಪಕ್ಷಗಳ ನಡುವೆ, ವಿಶೇಷವಾಗಿ ಕಾಂಗ್ರೆಸ್ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಈ ಚರ್ಚೆ ನಡೆಯುತ್ತಿದೆ. ಬಿಜೆಪಿ ನಾಯಕರು ತುರ್ತು ಪರಿಸ್ಥಿತಿಯ ಬಗ್ಗೆ ಚರ್ಚೆ ಆರಂಭಿಸುವ ನಿರೀಕ್ಷೆಯಿದ್ದು, ಪ್ರತಿಪಕ್ಷಗಳು ಸುಳ್ಳು ನಿರೂಪಣೆಗಳನ್ನು ದೇಶದ ಮುಂದಿಡುತ್ತಿದ್ದಾರೆ ಎಂದು ಪ್ರತಿಪಾದಿಸುವ ಸಾಧ್ಯತೆಗಳಿವೆ.







# ಗೋಡ್ಸೆ ಸಿನಿಮಾಗೆ ರಿಷಭ್ ಸೂಕ್ತ ವ್ಯಕ್ತಿ!

ಮಹಾತ್ಮ ಗಾಂಧೀಜಿ ಅವರನ್ನು 1948ರ ಜನವರಿ 30ರಂದು ನಾಥೂರಾಮ್ ಗೋಡ್ಸೆ ಗುಂಡಿಕ್ಕಿ ಹತ್ಯೆಗೈದಿದ್ದನು. ಈ ಕುರಿತು ಸಿನಿಮಾ ಮಾಡುವುದಾದಲ್ಲಿ ಗೋಡ್ಸೆ ಪಾತ್ರಕ್ಕೆ ನಮ್ಮ ಕನ್ನಡ ಚಿತ್ರರಂಗದ ಪ್ಯಾನ್ ಇಂಡಿಯಾ ಸ್ಟಾರ್ ರಿಷಭ್ ಶೆಟ್ಟಿ ಅವರೇ ಸೂಕ್ತ ವ್ಯಕ್ತಿ ಆಗಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಳ್ಳಲಾಗಿದೆ. ಈ ಪೋಸ್ಟ್ ಇದೀಗ ವೈರಲ್ ಆಗುತ್ತಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಹೋರಾಟ ಮಾಡಿದ ಗಣ್ಯರ ಸಾಲಿನಲ್ಲಿ ಗಾಂಧೀಜಿ ಅವರು ಮೊದಲಿಗರಾಗಿ ನಿಲ್ಲುತ್ತಾರೆ. ಆದರೆ, ಇಂತಹ ಅವರನ್ನೇ ಕೆಲವು ಭಿನ್ನಾಭಿಪ್ರಾಯಗಳಿಂದಾಗಿ ನಾಥೂರಾಮ್ ಗೋಡ್ಸೆ 1948ರ ಜನವರಿ 30ರಂದು ಗಾಂಧಿಯನ್ನು ಗುಂಡಿಕ್ಕಿ ಹತ್ಯೆಗೈದಿದ್ದನು. ಈ ಕುರಿತು ಸಿನಿಮಾ ಮಾಡುವುದಾದಲ್ಲಿ ಗೋಡ್ಸೆ ಪಾತ್ರಕ್ಕೆ ನಮ್ಮ ಕನ್ನಡ ಚಿತ್ರರಂಗದ ಪ್ಯಾನ್ ಇಂಡಿಯಾ ಸ್ಟಾರ್ ರಿಷಭ್ ಶೆಟ್ಟಿ ಅವರೇ ಸೂಕ್ತ ವ್ಯಕ್ತಿ ಆಗಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಳ್ಳಲಾಗಿದೆ. ಇದೀಗ ಪೋಸ್ಟ್ ವೈರಲ್ ಆಗುತ್ತಿದ್ದು, ಗೋಡ್ಸೆ ಮುಖಭಾವ ಹಾಗೂ ರಿಷಭ್ ಶೆಟ್ಟಿ ಅವರ ಮೇಕಪ್ ಫೋಟೋಗಳನ್ನು ಹೋಲಿಕೆ ಮಾಡಿ ತೋರಿಸಲಾಗಿದೆ. ಇದರ ಹಿಂದೆ ಹಿಂದುತ್ವ ಎಂಬ ಅಜೆಂಡಾ ಕೂಡ ಇರಬಹುದು..





ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸನಾತನ ಎಂಬ ಖಾತೆಯಿಂದ ಈ ಕುರಿತು ಪೋಸ್ಟ್ ಹಂಚಿಕೊಳ್ಳಲಾಗಿದೆ. 'ನಾಥೂರಾಮ್ ಗೋಡ್ಸೆಯವರ ಸಿನಿಮಾ ಮಾಡಲು ಸೂಕ್ತ ವ್ಯಕ್ತಿ ರಿಷಭ್ ಶೆಟ್ಟಿ (@ಖಜಣಣಥಿ_ಢಿಖಚಿಛ) ಅವರು ಮಾತ್ರ. ನೀವು ಘೋಷಣೆ ಮಾಡಿದರೆ ಅದರ ಪ್ರಚಾರ ವಿರೋಧಿಗಳೇ ಮಾಡುತ್ತಾರೆ. ಗೋಡ್ಸೆಯವರ ಜೀವನಾಧಾರಿತ ಸಿನಿಮಾ ಮಾಡಿದರೆ ದೇಶದ ಜನತೆಗೆ ಗೊತ್ತಿರುವ ಅರ್ಧ ಸತ್ಯ, ಸುಳ್ಳು ಆರೋಪ ಎಲ್ಲವೂ ಮನದಟ್ಟಾಗುತ್ತದೆ' ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.ಮತ್ತೊಬ್ಬರು 'ಈ ಸಿನಿಮಾ 2017–18 ರಲ್ಲಿ ಸೆಟ್ಟೇರಿ ನಿಂತು ಹೋಗಿದೆ. ಸ್ವಲ್ಪ ಭಾಗ ಚಿತ್ರೀಕರಣ ಸಹ ಆಗಿತ್ತು' ಎಂದು ಕಾಮೆಂಟ್ ಮಾಡಿದ್ದು, ಇದಕ್ಕೆ ಸಾಕ್ಷಿ ಎಂಬಂತೆ ಪೋಸ್ಟರ್ ಒಂದನ್ನೂ ಕೂಡ ಹಂಚಿಕೊಂಡಿದ್ದಾರೆ. ಈ ಪೋಸ್ಟರ್‌ನಲ್ಲಿ ಗಾಂಧೀಜಿ 150ನೇ ವರ್ಷಾಚರಣೆಯ ಹಿನ್ನೆಲೆಯಲ್ಲಿ ಶ್ರೀ ದೇವಿ ಎಂಟರ್‌ಟೇನರ್ಸ್ ನಿರ್ಮಾಣ ಸಂಸ್ಥೆಯಿಂದ ಮಹಾತ್ಮನ ಸವಿ ನೆನಪುಗಳೊಂದಿಗೆ ಎಂದು ಬರೆದುಕೊಂಡು 'ನಾಥೂರಾಮ್' ಎಂಬ ಟೈಟಲ್ ಕೂಡ ರಿವೀಲ್ ಮಾಡಲಾಗಿದೆ. ಇನ್ನು ಈ ಸಿನಿಮಾದಲ್ಲಿ ರಿಷಭ್ ಶೆಟ್ಟಿ ಅವರೇ ನಾಯಕ ಎಂದು ಕೂಡ ಹೆಸರು ರಿವೀಲ್ ಮಾಡಲಾಗಿದೆ. ವಿನು ಬಾಲಂಜಾ ಅವರ ಕಥೆ ಮತ್ತು ನಿರ್ದೇಶನವಿದ್ದು, ಹೆಚ್. ಕೆ. ಪ್ರಕಾಶ್ ಅವರು ನಿರ್ಮಾಪಕರಾಗಿದ್ದಾರೆ ಎಂದು ತಿಳಿಸಲಾಗಿದೆ. ಆದರೆ, ಇದು ಎಷ್ಟು ಸತ್ಯ ಎಂಬುದು ಮಾತ್ರ ಚಿತ್ರತಂಡದ ಸದಸ್ಯರೇ ಹೇಳಿಕೊಳ್ಳಬೇಕು. ಈಗಾಗಲೇ ಭಾರತದಲ್ಲಿ ಹಿಂದಿ ಮತ್ತಿ ಇತರೆ ಭಾಷೆಗಳ ಅವತರಣಿಕೆಗಳಲ್ಲಿ ನಾಥೂರಾಮ್ ಗೋಡ್ಸೆ ಸಂಬಂಧಿತ ಸಿನಿಮಾಗಳು ಬಂದಿವೆ. ಇನ್ನು ಗೋಡ್ಸೆ ಕುರಿತಂತೆ ಕೆಲವು ಡಾಕ್ಯೂಮೆಂಟರಿಗಳು ಕೂಡ ಬಿಡುಗಡೆ ಆಗಿವೆ. ಈ ಸಿನಿಮಾ ಮತ್ತು ಡಾಕ್ಯೂಮೆಂಟರಿಗಳಲ್ಲಿ ಗೋಡ್ಸೆ ಒಬ್ಬ ಮಹಾನ್ ದೇಶಭಕ್ತ, ಹಿಂದೂವಾದಿ ಎಂಬುದನ್ನು ತೋರಿಸಲಾಗಿದೆ. ಗಾಂಧೀಜಿಯಿಂದ ಅಖಂಡ ದೇಶ ಇಬ್ಭಾಗ ಆಗಿದೆ ಮತ್ತು ಮುಸ್ಲಿಮರಿಗೆ ಪ್ರತ್ಯೇಕ ದೇಶ ಮಾಡಿದರೂ, ಪುನಃ ದೇಶದಲ್ಲಿ ಮುಸ್ಲಿಮರು ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಕೋಪಗೊಂಡು ಗಾಂಧೀಜಿ ಅವರನ್ನು ಹತ್ಯೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಹೀಗಾಗಿ, ಸತ್ಯಾಸತ್ಯತೆ ಪರಿಚಯಿಸಲು ಗೋಡ್ಸೆ ಜೀವನಾಧಾರಿತ ಸಿನಿಮಾ ಮಾಡಬೇಕು ಎಂದು ಸಾಮಾಜಿಕ ಜಾಲತಾಣದಲ್ಲಿ ಭಾರೀ ಚರ್ಚೆ ಆಗುತ್ತಿದೆ.



# ಇಷ್ಟು ದಿನ ಸಹಿಸಿಕೊಂಡೆ, ಇನ್ಮೇಲೆ ಸಹಿಸಲ್ಲ'

ಸೌತ್ ಇಂಡಿಯಾದ ಮೋಸ್ಟ್ ಬ್ಯೂಟಿಫುಲ್ ಹೀರೋಯಿನ್ ಅಂದರೆ ಅದು ಸಾಯಿ ಪಲ್ಲವಿ. ಸಾಲು ಸಾಲು ಸಿನಿಮಾಗಳಲ್ಲಿ ಸದ್ಯ ಇವರು ಫುಲ್ ಬ್ಯುಸಿಯಾಗಿದ್ದಾರೆ. ಆದರೆ ಇವರ ಕುರಿತು ಸೋಶಿಯಲ್ ಮೀಡಿಯಾದಲ್ಲಿ ಸುಳ್ಳು ಸುದ್ದಿಗಳು ಹರಿದಾಡುತ್ತಿರುತ್ತವೆ. ಈ ಬಗ್ಗೆ ಇಷ್ಟು ದಿನ ಸಹಿಸಿಕೊಂಡೆ, ಇನ್ಮುಂದೆ ಸಹಿಸಿಕೊಳ್ಳಲ್ಲ ಎಂದು ಬಿಗ್ ವಾರ್ನಿಂಗ್ ಕೊಟ್ಟಿದ್ದಾರೆ. ಈ ಎಲ್ಲ ಕೋಪ ತಾಪ ಯಾಕೆ ಎನ್ನುವುದು ಇಲ್ಲಿ ಇದೆ.

ಹಿಂದಿಯ ಬಿಗ್ ಬಜೆಟ್ ಸಿನಿಮಾವಾದ ರಾಮಾಯಣದಲ್ಲಿ ರಣಬೀರ್ ಶ್ರೀರಾಮನಾಗಿ ಅಭಿಯಿಸುತ್ತಿದ್ದರೇ, ಸಾಯಿ ಪಲ್ಲವಿ ಸೀತೆಯಾಗಿ ನಟನೆ ಮಾಡುತ್ತಿದ್ದಾರೆ. ಮೂವಿಯಲ್ಲಿ ಸೀತೆ ಪಾತ್ರ ಮಾಡುತ್ತಿದ್ದರಿಂದ ಸಾಯಿ ಪಲ್ಲವಿ ತನ್ನ ದಿನಚರಿ ಬದಲಾಯಿಸಿಕೊಂಡಿದ್ದಾರೆ. ಈ ಬದಲಾವಣೆಯಲ್ಲಿ ನಾನ್‌ವೆಜ್ ತಿನ್ನುವುದನ್ನೂ ಬಿಟ್ಟಿದ್ದಾರೆ ಎನ್ನಲಾಗಿದೆ. ಹೋಟೆಲ್‌ನಲ್ಲೂ ನಾನ್‌ವೆಜ್ ತಿನ್ನುವುದಿಲ್ಲ. ಅಷ್ಟೇ ಯಾಕೆ, ವಿದೇಶಕ್ಕೆ ಹೋದರೂ ಜೊತೆಯಲ್ಲಿ ಅಡುಗೆ ಭಟ್ಟರನ್ನ ಕರೆದುಕೊಂಡು ಹೋಗುತ್ತಿದ್ದಾರೆ. ರಾಮಾಯಣ ಸಿನಿಮಾ ಮುಗಿಯುವವರೆಗೆ ನಾನ್ ವೆಜ್ ತಿನ್ನುವುದಿಲ್ಲ ಎನ್ನಲಾಗಿದೆ.

ಆದರೆ ಇದು ಸತ್ಯವೋ, ಸುಳ್ಳೋ ಎಂಬುದು ನಿಖರವಾಗಿಲ್ಲ. ಆದರೆ ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗುತ್ತಿದೆ. ಇದರಿಂದ ಬೇಸರ ವ್ಯಕ್ತಪಡಿಸಿದ ನಟಿ ಸಾಯಿ ಪಲ್ಲವಿ ಎಚ್ಚರಿಕೆ ನೀಡಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಸಾಯಿ ಪಲ್ಲವಿಯವರು, ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದರೇ ಎಂತಹ ದೊಡ್ಡ ಸಂಸ್ಥೆಯಾದರೂ ಕಾನೂನು ಪ್ರಕಾರ ಕ್ರಮ ಎದುರಿಸಬೇಕಾಗುತ್ತದೆ ಎಂದು ವಾರ್ನಿಂಗ್ ಮಾಡಿದ್ದಾರೆ. 'ನನ್ನ ಬಗ್ಗೆ ಎಷ್ಟೋ ಸುಳ್ಳು ಸುದ್ದಿ, ಕಟ್ಟು ಕಥೆಗಳನ್ನು ಹಬ್ಬಿಸುವಾಗ ಬಹುತೇಕವಾಗಿ ನಾನು ಮೌನವಾಗಿರಲು ಬಯಸುತ್ತೇನೆ. ನಿಜ ಏನು ಅನ್ನೋದು ದೇವರಿಗೆ ಗೊತ್ತಿದೆ. ಮೌನವಾಗಿ ಇದ್ದಿದ್ದಕ್ಕೇನೋ ಇದು ನಿರಂತರವಾಗಿ ನಡೆಯುತ್ತಿದೆ. ಈಗ ಅದಕ್ಕೆ ಉತ್ತರಿಸುವ ಸಮಯ ಬಂದಿದೆ. ನನ್ನ ಸಿನಿಮಾ ರಿಲೀಸ್, ಪ್ರಕಟಣೆ, ನನ್ನ ಲೈಫ್ ಕುರಿತು ಯಾವುದೇ ಆಧಾರ ಇಲ್ಲದೇ ಪ್ರಕಟಿಸಿದರೆ, ಅದು ಎಂತಹ ದೊಡ್ಡ ಸಂಸ್ಥೆ ಆದ್ರೂ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಇದುವರೆಗೆ ಸಹಿಸಿದ್ದೇನೆ. ಇನ್ಮೇಲೆ ಇಂತಹ ಕೆಟ್ಟ ಕಥೆಗಳನ್ನ ಸಹಿಸಲ್ಲ' ಎಂದು ಬರೆದು ತಮ್ಮ ಅಧಿಕೃತ ಟ್ವೀಟ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

# ಶ್ರೀಲೀಲಾ ಕನ್ನಡಿಗರ ಮುದ್ದು, ರಶ್ಮಿಕಾಗೆ ನೆಟ್ಟಿಗರ ಗುದ್ದು



ಪುಷ್ಪ 2 ಸಿನಿಮಾ ಸದ್ಯ ಸಾವಿರ ಕೋಟಿ ಕ್ಲಬ್ ಸೇರಿದೆ. ಇದಕ್ಕೆ ರಶ್ಮಿಕಾ ಕನ್ನಡ ಖುಷಿಯಿಂದ ಕಾಮೆಂಟ್ ಮಾಡಿದ್ದಾರೆ. ಆದರೆ ನೆಟ್ಟಿಗರು ಮತ್ತೊಂದು ವಿಚಾರಕ್ಕೆ ಕನ್ನಡ ನೆಲದ ಹುಡುಗಿಯರಾದ ರಶ್ಮಿಕಾ ಮಂದಣ್ಣ ಹಾಗೂ ಶ್ರೀಲೀಲಾಗೂ ನಡುವೆ ಹೋಲಿಕೆ ಮಾಡಿ ರಶ್ಮಿಕಾಗೆ ಕ್ಲಾಸ್ ತಗೊಳ್ತಿದ್ದಾರೆ. ಅಷ್ಟಕ್ಕೂ ರಶ್ಮಿಕಾ ಹೇಳಿದ್ದರಲ್ಲಿ ಹೊಸತೇನೂ ಇಲ್ಲ. ಆದರೆ ನೆಟ್ಟಿಗರ ಸಿಟ್ಟು ಜಾಸ್ತಿ ಆಗೋದಕ್ಕೆ ಕಾರಣ ಇನ್ನೊಬ್ಬ ಹುಡುಗಿ ಶ್ರೀಲೀಲಾ ಉತ್ತರ. ಹೌದು, 'ಪುಷ್ಪ 2'ನಲ್ಲಿ ಮಿಂಚಿರೋ ಈ ಇಬ್ಬರು ಲೇಡೀಸ್ ವೀಡಿಯೋ ಸದ್ಯ ಸೋಷಲ್ ಮೀಡಿಯಾದಲ್ಲಿ ವೈರಲ್ ಆಗ್ತಿದೆ. ಹಾಗೆ ನೋಡಿದರೆ ರಶ್ಮಿಕಾ ಮೊದಲಿಂದಲೂ ಕನ್ನಡಿಗರ ಕೋಪಕ್ಕೆ ಕಾರಣ ಆಗ್ತನೇ ಬಂದಿದ್ದಾರೆ. ಕಾರಣ ಅವರಿಗೆ ತನಗೆ ಇಂಡಸ್ಟ್ರಿಗೆ ಬರಲು ಅವಕಾಶ ನೀಡಿದ ಇಂಡಸ್ಟ್ರಿ ಬಗ್ಗೆ ಇರುವ ತಾತ್ಸಾರ.

ರಶ್ಮಿಕಾ ಬಗ್ಗೆ ಈ ಲೆವೆಲ್‌ನಲ್ಲಿ ಕಿಡಿ ಕಾರೋದಕ್ಕೆ ಕಾರಣ ಶ್ರೀಲೀಲಾ. 'ಪುಷ್ಪಾ 2' ರಿಲೀಸ್ ಟೈಮಲ್ಲಿ ಈ ಇಬ್ಬರು ನಟಿಯರು ಬೇರೆ ಬೇರೆ ಯೂಟ್ಯೂಬ್‌ಗೆ ಇಂಟರ್‌ವ್ಯೂ ಕೊಡ್ತಾ ಬಂದರು. ಅದರಲ್ಲೊಂದು ಕಡೆ ರಶ್ಮಿಕ ಮಂದಣ್ಣ ಮಾತಾಡ್ತಾ ಡಬ್ಬಿಂಗ್ ವಿಚಾರ ಹೇಳಿದರು. 'ನನಗೀಗ ಡಬ್ಬಿಂಗ್‌ನದೇ ತಲೆನೋವು. ಕನ್ನಡ, ತಮಿಳು ಎಲ್ಲ ಭಾಷೆಗೂ ಡಬ್ಬಿಂಗ್ ಮಾಡ್ಬೇಕಲ್ಲಾ..' ಅಂದರು. ಆಗ ಆ ಸಂದರ್ಶಕ, 'ಕನ್ನಡ ನಿಮಗೆ ಸುಲಭ ಆಗಬಹುದು' ಅಂದರು. ಆದರೆ ಕಿರಿಕ್ ಬೆಡಗಿ ಸುಮ್ಮನಿದ್ದರೆ ನಡೀತಿತ್ತು. ಆಕೆ ಅಡ್ಡಡ್ಡ ತಲೆ ಆಡಿಸಿದರು. ಹೇಳಿಕೇಳಿ ಅದು ತಮಿಳು ಮೂಲದ ಚಾನೆಲ್. ಆತ ತಮಿಳಿನಲ್ಲಿ ರಶ್ಮಿಕಾ ಜೊತೆಗೆ ಮಾತಾಡ್ತಿದ್ದರು. ತಮಿಳನ್ನು ಪಟ ಪಟ ಮಾತನಾಡಿದ ರಶ್ಮಿಕಾ ಕನ್ನಡದ ವಿಚಾರಕ್ಕೆ ಮಾತ್ರ 'ನೋ' ಅಂತ ತಲೆ ಆಡಿಸಿದ್ದು ಆ ಸಂದರ್ಶಕನಿಗೂ ತಲೆನೋವಾಯ್ತು.

'ಹೌದಾ? ಕನ್ನಡವೂ ನಿಮಗೆ ಕಷ್ಟನಾ?' ಅಂತ ಕೇಳಿಬಿಟ್ಟರು. ರಶ್ಮಿಕಾ, 'ಹೌದು' ಅಂದುಬಿಟ್ಟರು. 'ಮತ್ತೆ, ತಮಿಳು ಇಷ್ಟು ಚೆನ್ನಾಗಿ ಮಾತಾಡ್ತೀರಿ' ಅಂತ ಆ ನಿರೂಪಕ ಕೇಳಿದಾಗ ರಶ್ಮಿಕಾಗೆ ಏನು ಹೇಳಲೂ ತೋಚಲಿಲ್ಲ. ಆಮೇಲೆ ಸಾವರಿಸಿಕೊಂಡು, 'ನಂಗೆ ಎಲ್ಲ ಭಾಷೆಗಳನ್ನೂ ಮಾತನಾಡೋಕೆ ಕಷ್ಟ ಆಗುತ್ತೆ. ಕಷ್ಟಪಟ್ಟೇ ಮಾತಾಡ್ತೀನಿ. ನಂಗೆ ಯಾವ ಭಾಷೆಯನ್ನೂ ಸರಿಯಾಗಿ ಮಾತನಾಡಲು ಬರೋದಿಲ್ಲ' ಅಂದುಬಿಟ್ಟರು. ಆತ ಕಕ್ಕಾಬಿಕ್ಕಿಯಾದ.

ರಶ್ಮಿಕಾ ಈ ಮಾತು ಮತ್ತೆ ಟ್ರೋಲಿಗರಿಗೆ ಆಹಾರವಾಗಿದೆ. ಇನ್ನೊಂದೆಡೆ ಇದೇ ಸಿನಿಮಾದಲ್ಲಿ 'ಕಿಸಕ್' ಅನ್ನೋ ಸ್ಪೆಷಲ್ ನಂಬರ್‌ಗೆ ಬಿಂದಾಸ್ ಆಗಿ ಹೆಜ್ಜೆ ಹಾಕಿರೋ ಶ್ರೀಲೀಲಾಗೂ ಕನ್ನಡದ ಬಗ್ಗೆ ಪ್ರಶ್ನೆ ಮಾಡಲಾಯ್ತು. ಅದು ಪ್ರೆಸ್ ಮೀಟ್‌ನಲ್ಲಿ,' ಮೇಡಂ ಕನ್ನಡ ಬರುತ್ತಾ ನಿಮಗೆ?' ಅಂತ ಕೇಳಿದಾಗ, ಶ್ರೀಲೀಲಾ ಹೆಮ್ಮೆಯಿಂದ, 'ನಾನು ಕನ್ನಡದವಳೇ. ಕನ್ನಡ ಬರದೇ ಇರುತ್ತಾ' ಅಂದುಬಿಟ್ಟರು. ಹೀಗೆ ಬೇರೆ ಭಾಷೆಗೆ ಹೋಗಿರೋ ನಟಿಯರಿಂದ ಕನ್ನಡತನ ಬಿಟ್ಟು ಹೆಚ್ಚೇನನ್ನೂ ಎಕ್ಸ್‌ಪೆಕ್ಟ್ ಮಾಡದ ಕನ್ನಡಿಗರಿಗೆ ಇದರಿಂದ ಖುಷಿಯಾಗಿದೆ. ಒಂದೇ ಸಿನಿಮಾದಲ್ಲಿ ಮಾಡಿರೋ ಇಬ್ಬರು ನಟಿಯರಿಗೆ ಅದೆಷ್ಟು ವ್ಯತ್ಯಾಸ.. ಒಬ್ಬರು ತನ್ನ ತಾಯ್ನುಡಿ ಬಗ್ಗೆ ತಾತ್ಸಾರದಿಂದ ಮಾತಾಡ್ತಾರೆ. ಮತ್ತೊಬ್ಬರು ಅಭಿಮಾನದಿಂದ ಮಾತಾಡ್ತಾರೆ. ಸದ್ಯ ರಶ್ಮಿಕಾಗೆ ಚೆನ್ನಾಗಿ ಕ್ಲಾಸ್ ತಗೊಂಡಿರೋ ಮಂದಿ ಶ್ರೀಲೀಲಾ ಚಿನ್ನದಂಥಾ ಹುಡುಗಿ ಅಂತ ಮುದ್ದಿನ ಮಾತು ಹೇಳ್ತಿದ್ದಾರೆ.





# 'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾಗೆ ಕಾಜಲ್ ಕುಂದರ್ ನಾಯಕಿ

ಈವರೆಗೂ ಚಿತ್ರರಂಗದಲ್ಲಿ ಯಾರೂ ಹೇಳಿರದ ಒಂದು ವಿಷಯವನ್ನು ಇಟ್ಟುಕೊಂಡು 'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾ ಸಿದ್ಧವಾಗಿದೆ. ವಿಟಿಲೈಗೋ (ತುಣುಟುರಂ) ಅಥವಾ ತೊನ್ನು ಕಾಯಿಲೆ ಕುರಿತ ಕಥೆಯನ್ನು ಈ ಸಿನಿಮಾ ಮೂಲಕ ಹೇಳಲಾಗುತ್ತಿದೆ ಎಂಬುದು ವಿಶೇಷ. ಈ ಚಿತ್ರದಲ್ಲಿ ಕಾಜಲ್ ಕುಂದರ್ ಅವರು ನಾಯಕಿಯಾಗಿ ನಟಿಸಿದ್ದಾರೆ. ಮಾಮೂಲಿ ಕಥಾಹಂದರವನ್ನು ಬಿಟ್ಟು ಬೇರೆ ರೀತಿಯ ಡಿಫರೆಂಟ್ ವಿಷಯವನ್ನು ಬೆಳ್ಳಿತೆರೆಯಲ್ಲಿ ತೋರಿಸುವ ಪ್ರಯತ್ನಗಳು ಆಗಾಗ ನಡೆಯುತ್ತವೆ. ಅಂತಹ ಸಿನಿಮಾಗಳ ಸಾಲಿಗೆ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾ ಕೂಡ ಸೇರ್ಪಡೆ ಆಗುತ್ತದೆ. ಯಾಕೆಂದರೆ, ಈ ಸಿನಿಮಾದಲ್ಲಿ ವಿಟಿಲೈಗೋ ಅಥವಾ ತೊನ್ನು ರೋಗದ ಬಗ್ಗೆ ಕಥೆಯನ್ನು ಹೇಳಲಾಗುತ್ತಿದೆ. ಈ ಸಿನಿಮಾ ಬಗ್ಗೆ ಚಿತ್ರತಂಡದವರು ಹಂತಹಂತವಾಗಿ ಕೆಲವು ಮಾಹಿತಿಗಳನ್ನು ಹಂಚಿಕೊಳ್ಳುತ್ತಿದ್ದಾರೆ. ನಾಯಕಿ ಪಾತ್ರದ ಬಗ್ಗೆ ಈಗ ಮಾಹಿತಿ ಸಿಕ್ಕಿದೆ. ಖ್ಯಾತ ನಟಿ ಕಾಜಲ್ ಕುಂದರ್ ಅವರು ತುಣುಟುರಂ ಕುರಿತ ಕಹಾನಿ ಇರುವ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾಗೆ ನಾಯಕಿಯಾಗಿದ್ದಾರೆ.

ಈ ಮೊದಲು 'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾದ ಪೋಸ್ಟರ್ ಬಿಡುಗಡೆ ಆಗಾದ ಕೌತುಕ ಮೂಡಿಸಿತ್ತು. ತೊನ್ನು ಕಾಯಿಲೆ ಬಗ್ಗೆ ಮೂಡಿಬರುತ್ತಿರುವ ಮೊದಲ ಕಮರ್ಷಿಯಲ್ ಸಿನಿಮಾ ಎಂಬ ಖ್ಯಾತಿ ಈ ಸಿನಿಮಾಗೆ ಇದೆ. ಇಂಥ ಒಂದು ಅಪರೂಪದ ಕಥಾಹಂದರದ ಸಿನಿಮಾಗೆ ಮಹೇಶ್ ಗೌಡ ಅವರು ನಿರ್ದೇಶನ ಮಾಡಿದ್ದಾರೆ. ಮುಖ್ಯ ಪಾತ್ರದಲ್ಲಿ ನಟಿಸುವುದರ ಜೊತೆಗೆ ನಿರ್ಮಾಣವನ್ನೂ ಅವರೇ ಮಾಡಿದ್ದಾರೆ.'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾದ ಪಾತ್ರ ವರ್ಗಕ್ಕೆ ಕಾಜಲ್ ಕುಂದರ್ ಅವರು ಎಂಟ್ರಿ ನೀಡಿದ್ದಾರೆ. ಕಾಜಲ್ ಕುಂದರ್ ಅವರು ಮಂಗಳೂರು ಮೂಲದವರು. ಈಗಾಗಲೇ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಅವರ ಪಾತ್ರವನ್ನು ಪರಿಚಯಿಸುವಂತಹ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ಆ ಮೂಲಕ ನಿರೀಕ್ಷೆ ಹೆಚ್ಚಿಸಲಾಗಿದೆ. ಈ ಪೋಸ್ಟರ್ ಕೂಡ ಒಂದು ಕಥೆಯನ್ನೇ ಹೇಳುವಂತಿದೆ. ಈ ಸಿನಿಮಾದಲ್ಲಿ ಕವಿತಾ ಎಂಬ ಪಾತ್ರವನ್ನು ಕಾಜಲ್ ಕುಂದರ್ ನಿಭಾಯಿಸಿದ್ದಾರೆ. ಮುಂಬೈನಲ್ಲಿ ವಾಸವಾಗಿರುವ ಕಾಜಲ್ ಕುಂದರ್ ಅವರು ಕನ್ನಡವನ್ನು ಸ್ಪಷ್ಟವಾಗಿ ಮಾತನಾಡುತ್ತಾರೆ. ರಂಗಭೂಮಿಯಲ್ಲಿ ನಟಿಸಿದ ಅನುಭವ ಕೂಡ ಅವರಿಗೆ ಇದೆ. ಹಾಗಿದ್ದರೂ ಕೂಡ ಆಡಿಷನ್ ಮೂಲಕವೇ ಅವರು 'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾಗೆ ಆಯ್ಕೆ ಆದರು. ಇದು ಅವರ ಪಾಲಿಗೆ ಮೈಲಿಗಲ್ಲಿನ ಸಿನಿಮಾ ಆಗಲಿದೆ ಎಂದು ಚಿತ್ರತಂಡ ಅಭಿಪ್ರಾಯಪಟ್ಟಿದೆ.'ಬಿಳಿಚುಕ್ಕಿ ಹಳ್ಳಿಹಕ್ಕಿ' ಚಿತ್ರ 'ಹೊನ್ನುಡಿ ಪ್ರೊಡಕ್ಷನ್ಸ್' ಮೂಲಕ ನಿರ್ಮಾಣ ಆಗಿದೆ. ಸದ್ಯಕ್ಕೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಸದ್ಯದಲ್ಲೇ ಸಿನಿಮಾದ ರಿಲೀಸ್ ಡೇಟ್ ಕೂಡ ಅನೌನ್ಸ್ ಆಗಲಿದೆ. ತೊನ್ನು ಸಮಸ್ಯೆಯಿಂದ ಲಕ್ಷಾಂತರ ಜನರು ಕೊರಗುತ್ತಿದ್ದಾರೆ. ಅಂಥವರ ಮಾನಸಿಕ ತೊಳಲಾಟಗಳ ಸುತ್ತ ಇರುವ ಕಥೆಯನ್ನು ಈ ಸಿನಿಮಾ ಮೂಲಕ ತೆರೆಗೆ ತರಲಾಗುತ್ತಿದೆ.

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
RNI.KAR/KAN/2009/31934.VOLUME-16/ISSUE-24 Email-mussanje2010@gmail.com, Phone: 9448074878